ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಹೋಬಾರ್ಟ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದ 3ನೇ ಟಿ-20 ಪಂದ್ಯದಲ್ಲಿ 3 ವಿಕೆಟ್ ಪಡೆದು ಸಂಭ್ರಮಿಸಿದ ಭಾರತ ತಂಡದ ಅರ್ಷದೀಪ್ ಸಿಂಗ್

03 ನವೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 233 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಕನ್ನಡದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆಯೇ ? » 2


ಪೌರಾಣಿಕ ನಾಟಕಗಳು ಸಾಮಾಜಿಕ ಪರಿವರ್ತನೆಗೆ ಪ್ರೇರಣೆ » 3


ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಐದು ವಿಕೆಟ್ ಜಯ » 4

# ಬಿಹಾರ ಚುನಾವಣೆ: ಮೋದಿ-ರಾಹುಲ್ ಮತ ಬೇಟೆ

## ನ. 6, 11 ರಂದು ಎರಡು ಹಂತದ ಮತದಾನ | ಬೆಂಗಳೂರಿನಲ್ಲೂ ಮತಯಾಚನೆ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರದ ಗಮನ ಸೆಳೆದಿರುವ ಬಿಹಾರ ವಿಧಾನಸಭೆ ಚುನಾವಣಾ ಪ್ರಚಾರ ಬಿರುಸು ಪಡೆದಿದ್ದು, ಭಾನುವಾರ ಪ್ರಧಾನಿ ನರೇಂದ್ರ ಮೋದಿ ಹಾಗು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಜೋರು ಪ್ರಚಾರ ನಡೆಸಿದರು.

ಭೋಜಪುರ ಜಿಲ್ಲೆಯ ಆರಾದಲ್ಲಿ ಮಾತನಾಡಿದ ಪ್ರಧಾನಿ ಮೋದಿ ಅವರು, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಒಪ್ಪಿಕೊಳ್ಳಲು ಕಾಂಗ್ರೆಸ್ ಸಿದ್ಧವಿರಲಿಲ್ಲ. ಆದರೆ ಬೆದರಿಕೆಗೆ ಮಣಿದು ಒಪ್ಪಿಕೊಳ್ಳಬೇಕಾಯಿತು. ಆರ್‌ಜೆಡಿ ಪಕ್ಷದವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲು ಕಾಂಗ್ರೆಸ್ ಎಂದಿಗೂ ಬಯಸಿರಲಿಲ್ಲ. ಆರ್‌ಜೆಡಿಯು ಕಾಂಗ್ರೆಸ್‌ನ ತಲೆಗೆ ಕಟ್ಟಾ (ನಾಡ ಪಿಸ್ತೂಲ್) ಗುರಿ ಇಟ್ಟು ಬೆದರಿಸುವ ಮೂಲಕ ಮುಖ್ಯಮಂತ್ರಿ ಅಭ್ಯರ್ಥಿ ಸ್ಥಾನವನ್ನು ತನ್ನದಾಗಿಸಿಕೊಂಡಿತು. ಚುನಾವಣೆಯ ನಂತರ ಎರಡೂ ಪಕ್ಷಗಳ ನಾಯಕರು ಪರಸ್ಪರ ತಲೆ ಒಡೆಯಲಿದ್ದಾರೆ. ಅದರಿಂದ ಬಿಹಾರಕ್ಕೆ ಯಾವುದೇ ಒಳಿತು ಉಂಟಾಗದು ಎಂದು ವಾಗ್ದಾಳಿ ನಡೆಸಿದರು.



ನಮ್ಮ ಸೈನಿಕರು ಪಾಕಿಸ್ತಾನದಲ್ಲಿನ ಭಯೋತ್ಪಾದಕರ ಅಡಗುತಾಣಗಳ ಮೇಲೆ ಬಾಂಬ್ ದಾಳಿ ನಡೆಸಿದಾಗ ಕಾಂಗ್ರೆಸ್‌ನ ರಾಜಮನೆತನದವರು ನಿದ್ದೆ ಕಳೆದುಕೊಳ್ಳುತ್ತಿದ್ದರು. ಪಾಕಿಸ್ತಾನ ಮತ್ತು ಕಾಂಗ್ರೆಸ್, ಆಪರೇಷನ್ ಸಿಂಧೂರದ ಆಘಾತದಿಂದ ಇನ್ನೂ ಚೇತರಿಸಿಕೊಂಡಿಲ್ಲ. ಅವರು (ರಾಹುಲ್) ನುಸುಳುಕೋರರಿಗೆ ರಕ್ಷಣೆ ನೀಡಲಿಕ್ಕಾಗಿ ಮತದಾರರ ಅಧಿಕಾರ ಯಾತ್ರೆ ನಡೆಸಿದ್ದಾರೆ. ಬಿಹಾರದ ಜನರ ಸಂಪನ್ಮೂಲ ನುಸುಳುಕೋರರ ಕೈಸೇರಬಾರದು.
-ನರೇಂದ್ರ ಮೋದಿ, ಪ್ರಧಾನಿ

ಆಡಳಿತಾರೂಢ ಎನ್‌ಡಿಎ ಭಾರೀ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ವಿಕಸಿತ ಭಾರತಕ್ಕೆ ಅಗತ್ಯವಾಗಿರುವ ಅಭಿವೃದ್ಧಿ ಹೊಂದಿದ ಬಿಹಾರ ನಿರ್ಮಾಣದ ಕೆಲಸ ಮುಂದುವರಿಯಲಿದೆ. ಆರ್‌ಜೆಡಿಯ ಜಂಗಲ್ ರಾಜ್ ಆಡಳಿತವನ್ನು ಬಿಹಾರದ ಜನರು ಇನ್ನೂ ಮರೆತಿಲ್ಲ. ಜಂಗಲ್ ರಾಜ್ ವಾಲಾಗಳು ಈ ಚುನಾವಣೆಯಲ್ಲಿ ಇತಿಹಾಸದಲ್ಲೇ ಹೀನಾಯ ಸೋಲು ಎದುರಿಸಲಿದ್ದಾರೆಂದು ಹೇಳಿದರು.

**ಬಿಜೆಪಿ-ಆರ್‌ಎಸ್‌ಎಸ್‌ನಿಂದ ಮತ ಕಳವು**

ಕರ್ನಾಟಕ, ಮಹಾರಾಷ್ಟ್ರ, ಹರಿಯಾಣ ಮತ್ತು ಮಧ್ಯ ಪ್ರದೇಶದ ಚುನಾವಣೆಗಳನ್ನು ಬಿಜೆಪಿ ಹಾಗು ಆರ್‌ಎಸ್‌ಎಸ್ ಸಂಪೂರ್ಣವಾಗಿ ಕದ್ದಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಬೆಗೂಸರಾಯ್‌ನಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗವು ಬಿಹಾರದಲ್ಲಿ ಮಹಾಘಟಬಂಧನ್ ಮೈತ್ರಿಕೂಟದ ಬೆಂಬಲಿಗರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದೆ. ನಾವು ಅದಕ್ಕೆ ಈಗಾಗಲೇ ಪುರಾವೆಗಳನ್ನು ಒದಗಿಸಿದ್ದು, ಅದನ್ನು ಮತ್ತೆ ಒದಗಿಸುತ್ತೇವೆ. ಪ್ರಧಾನಿ ಮೋದಿ ಅವರು ಮತ ಗಳಿಕೆಗಾಗಿ ಏನು ಬೇಕಾದರೂ ಮಾಡಲು ಸಿದ್ಧರಿದ್ದಾರೆ. ನೀವು ಅವರಿಗೆ (ಪ್ರಧಾನಿಗೆ) ಯೋಗ ಮಾಡಲು ಹೇಳಿದರೆ ಅವರು ಕೆಲವು ಆಸನಗಳನ್ನು ಮಾಡುತ್ತಾರೆಂದು ವ್ಯಂಗ್ಯವಾಡಿದರು.

ಮತ ಗಳಿಸಲು ಅವರು ವೇದಿಕೆಯ ಮೇಲೆ ನೃತ್ಯ ಮಾಡುತ್ತಾರೆ. ಚುನಾವಣೆಯವರೆಗೆ ನೀವು ಏನೇ ಹೇಳಿದರೂ ಮೋದಿ ಅದನ್ನು ಮಾಡುವರು. ಚುನಾವಣೆಯ ನಂತರ ಅವರು ತಮ್ಮ ನೆಚ್ಚಿನ ಉದ್ಯಮಿಗಳ ಪರವಾಗಿ ಮಾತ್ರ ಕೆಲಸ ಮಾಡುತ್ತಾರೆಂದು ಟೀಕಿಸಿದರು.

### ಬಿಹಾರಿಗಳ ಮತಯಾಚಿಸಿದ ಡಿ.ಕೆ.ಶಿವಕುಮಾರ್

ನ.6 ಹಾಗು 11ರಂದು ಎರಡು ಹಂತದಲ್ಲಿ ಬಿಹಾರ ವಿಧಾನಸಭೆ ಚುನಾವಣೆ ನಡೆಯಲಿದ್ದು, ಬೆಂಗಳೂರಿನಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಹಾರಿ ಪ್ರಜೆಗಳನ್ನು ಭೇಟಿ ಮಾಡಿ ಮತಯಾಚಿಸಿದ್ದಾರೆ.

ನಾವೆಲ್ಲಾ ಭಾರತೀಯರು. ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ನಿಮ್ಮ ಮುಂದೆ ನಿಂತಿದ್ದೇನೆ. ರಾಷ್ಟ್ರ ಧ್ವಜ, ಸಂವಿಧಾನದ ರಕ್ಷಣೆ ಯಲ್ಲಿ ನಾವೆಲ್ಲಾ ಬದುಕುತ್ತಿದ್ದೇವೆ. ಬೇರೆ ಪಕ್ಷದವರು ದೆಹಲಿಯಲ್ಲಿ ಇರಬಹುದು. ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ ವೆಂಬ ಇತಿಹಾಸವಿದೆ. ಪ್ರಧಾನಿ ಆಗುವ ಅವ ಕಾಶ ಸೋನಿಯಾ ಅವರ ಮನೆ ಬಾಗಿಲಿಗೆ ಬಂದಿತ್ತು. ಆರ್ಥಿಕ ತಜ್ಞರಿಗೆ ಅವಕಾಶ ಕೊಡ ಲು ಅವರು ತ್ಯಾಗ ಮಾಡಿದರು. ದೇಶ ಕ್ಕಾಗಿ ಇಂದಿರಾ ಗಾಂಧಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆಂದು ಡಿ.ಕೆ.ಶಿವಕುಮಾರ್ ಅವರು ಹೇಳಿದರು.

# ಸಮುದ್ರದ ಅಲೆಗೆ ಸಿಲುಕಿ ಮೂವರು ವಿದ್ಯಾರ್ಥಿಗಳ ಸಾವು

• ಪ್ರಜೋದಯ ವರದಿ

**ಹಾಸನ:** ಸ್ನೇಹಿತರೊಂದಿಗೆ ಪ್ರವಾಸಕ್ಕೆಂದು ತೆರಳಿದ್ದ ನಗರದ ಯುವಕ ಸೇರಿ ಮೂವರು ವಿದ್ಯಾರ್ಥಿಗಳು ಸಮುದ್ರದ ಅಲೆಗಳ ಹೊಡೆತಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆ ಕೇರಳದ ಪಯ್ಯಂಬಳಂ ಕಡಲ ತೀರದಲ್ಲಿ ಭಾನುವಾರ ನಡೆದಿದೆ.

ನಗರದ ಕ್ರಿಶ್ಚಿಯನ್ ಕಾಲೋನಿಯ ಅಫ್ನಾನ್ (25), ಚಿತ್ರದುರ್ಗದ ರೆಹಾನುದ್ದೀನ್, ಅಫ್ರಾಝ್ ಮೃತರು. ತನ್ವೀರ್ ಅಹ್ಮದ್ ಹಾಗು ಸೀಮಾ ಅವರ ಪುತ್ರ, ಅಫ್ನಾನ್ ಬೆಂಗಳೂರಿನ ಅಲ್‌ಮಿನ್ ಕಾಲೇಜಿನಲ್ಲಿ ಡಿಫಾರ್ಮಾ ವ್ಯಾಸಂಗ ಮುಗಿಸಿ ಇಂಟರ್ನ್‌ಶಿಪ್ ಮಾಡಿಕೊಂಡಿದ್ದ. ಹೊಳೆನರಸೀಪುರದಲ್ಲಿ ಪ್ರೌಢಶಾಲೆ, ಪಿಯುಸಿಯನ್ನು ಹಾಸನದಲ್ಲಿ ಮುಗಿಸಿದ್ದ. ಡಿಫಾರ್ಮಾ ವ್ಯಾಸಂಗಕ್ಕಾಗಿ ಬೆಂಗಳೂರಿನಲ್ಲೇ ನೆಲೆಸಿದ್ದ.

ಕನ್ನಡ ರಾಜ್ಯೋತ್ಸವ ರಜೆ ಹಿನ್ನಲೆಯಲ್ಲಿ ಶನಿವಾರ 11 ಸ್ನೇಹಿತರು ಒಟ್ಟಾಗಿ ಕೇರಳ ಪ್ರವಾಸಕ್ಕೆ ತೆರಳಿದ್ದರು. ಭಾನುವಾರ ಬೆಳಿಗ್ಗೆ 8 ಗಂಟೆಗೆ ಯುವಕರು ಸ್ನಾನಕ್ಕೆಂದು ಸಮುದ್ರಕ್ಕೆ ಇಳಿದಿದ್ದರು. ಸಮುದ್ರದ ಅಲೆಗಳ ಹೊಡೆತಕ್ಕೆ ಸಿಲುಕಿದ್ದ ಅಫ್ರಾಜ್‌ನ ರಕ್ಷಣೆಗಾಗಿ ಧಾವಿಸಿದ್ದ ಅಫ್ನಾನ್ ಹಾಗು ರೆಹಾನುದ್ದೀನ್ ಸಹ ಅಲೆಗಳ ಹೊಡೆತಕ್ಕೆ ಸಿಲುಕಿ ವಾಪಾಸ್ ಬರಲು ಸಾಧ್ಯವಾಗದೆ ಜಲ ಸಮಾಧಿ ಆಗಿದ್ದಾರೆ.

ಅಲ್ಲಿಯೇ ಇದ್ದ ಮೀನುಗಾರರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಮೂರು ಮೃತದೇಹಗಳನ್ನು ಹೊರ ತೆಗೆದರು.

ಶನಿವಾರ ಸಂಜೆ ಕರೆ ಮಾಡಿ ಸ್ನೇಹಿತರೊಂದಿಗೆ ಇರುವುದಾಗಿ ಹಾಗು ಭಾನುವಾರ ಬೆಂಗಳೂರಿಗೆ ಬರುತ್ತೇನೆಂದು ಹೇಳಿದ್ದ. ಕೇರಳ ಪೊಲೀಸರು ದುರಂತದ ಮಾಹಿತಿ ನೀಡಿದ್ದು, ಅಲ್ಲಿಗೆ ಹೋಗುತ್ತಿದ್ದೇವೆಂದು ಮೃತ ಅಫ್ನಾನ್ ಸಹೋದರಿ ಪ್ರತಿಕ್ರಿಯಿಸಿದರು.

# ಮದ್ಯಕ್ಕೆ ದಾಸನಾಗಬೇಡ ಎಂದಿದ್ದಕ್ಕೆ ವ್ಯಕ್ತಿಯ ಕೊಲೆ

• ಪ್ರಜೋದಯ ವರದಿ

**ಅರಸೀಕೆರೆ:** ದುಡಿಯುವ ವಯಸ್ಸಿನಲ್ಲಿ ಕುಡಿತಕ್ಕೆ ದಾಸನಾಗಬೇಡ, ಒಳ್ಳೆಯ ಬದುಕು ಕಟ್ಟಿಕೋ, ತಂದೆ-ತಾಯಿಯನ್ನು ಚೆನ್ನಾಗಿ ನೋಡಿಕೋ ಎಂದು ಬುದ್ದಿಮಾತು ಹೇಳಿದ ತಪ್ಪಿಗೆ ಯುವಕನೊಬ್ಬ ವ್ಯಕ್ತಿಯನ್ನು ಕಲ್ಲಿನಿಂದ ಜಜ್ಜಿ ಹತ್ಯೆಗೈದಿರುವ ಅಮಾನವೀಯ ಘಟನೆ ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಶನಿವಾರ ನಡೆದಿದೆ.



ಗ್ರಾಮದ ಗಿರೀಶ್ (44) ಮೃತರು. ಅದೇ ಊರಿನ ರಮೇಶ್ ಎಂಬಾತ ಕೊಲೆಗೈದ ಆರೋಪಿಯಾಗಿದ್ದು ನಾಪತ್ತೆಯಾಗಿದ್ದಾನೆ. ಈ ಘಟನೆಯಿಂದ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ. ಬುದ್ದಿಮಾತು ಪ್ರಾಣ ತೆಗೆಯಿತು.

ಮೂರು ದಿನಗಳ ಹಿಂದೆ ಗ್ರಾಮದ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದಾಗ ರಮೇಶ್ ಬಳಿಗೆ ಬಂದಿದ್ದ ಗಿರೀಶ್ ಅವರು ನಿನಗಿನ್ನು ಚಿಕ್ಕ ವಯಸ್ಸು ವಿಪರೀತ ಮದ್ಯ ಸೇವಿಸಬೇಡ. ಕ್ರಿಕೆಟ್ ಬ್ಯಾಟ್ ಹಿಡಿಯಲು ಸಾಧ್ಯವಾಗದಷ್ಟು ಆರೋಗ್ಯ ಹಾಳು ಮಾಡಿಕೊಂಡಿದ್ದೀಯಾ. ಉತ್ತಮ ಭವಿಷ್ಯಕ್ಕಾಗಿ ಕುಡಿತ ಬಿಟ್ಟುಬಿಡು ಎಂದು ಬುದ್ದಿಮಾತು ಹೇಳಿದ್ದರು. ಆದರೆ, ಆ ಕಿವಿಮಾತು ಗಿರೀಶ್ ಅವರ ಪ್ರಾಣಕ್ಕೆ ಕುತ್ತು ತರುತ್ತದೆಂದು ಯಾರೂ ಭಾವಿಸಿರಲಿಲ್ಲ.

ಹಿರಿಯರ ಮಾತನ್ನು ಗೌರವಯುತವಾಗಿ ಸ್ವೀಕರಿಸಬೇಕಿದ್ದ ಯುವಕ ರಮೇಶ್ ಶನಿವಾರ ಸಂಜೆ ಕಂಠಪೂರ್ತಿ ಕುಡಿದು ಚಿಲ್ಲರೆ ಅಂಗಡಿ ಮುಂದೆ ನಿಂತಿದ್ದ ಗಿರೀಶ್ ಅವರ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ನನ್ನ ಕುಡಿತದ ಸಾಧಕ ಬಾಧಕಗಳ ಕುರಿತು ಚರ್ಚಿಸಲು ನೀನ್ಯಾರು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಗಲಾಟೆ ಜೋರಾಗುತ್ತಿದ್ದಂತೆ ಸ್ಥಳೀಯರು ಇಬ್ಬರನ್ನು ಸಮಾಧಾನಪಡಿಸಿದ್ದರು. ಈತನ ಸಹವಾಸ ಬೇಡವೆಂದು ಗಿರೀಶ್ ಅವರು ಕಾಲ್ನಡಿಗೆಯಲ್ಲಿ ಮನೆಗೆ ಹೋಗುತ್ತಿದ್ದಾಗ ಬೆನ್ನಟ್ಟಿ ಬಂದ ರಮೇಶ್ ಕಲ್ಲಿನಿಂದ ಮುಖಕ್ಕೆ ಜಜ್ಜಿದ್ದಾನೆ. ಹೊಡೆತದ ರಭಸಕ್ಕೆ ಗಿರೀಶ್ ರಸ್ತೆ ಮೇಲೆ ಬಿದ್ದಿದ್ದು, ತಕ್ಷಣವೇ ಅವರನ್ನು ಹಾಸನದ ಆಸ್ಪತ್ರೆಗೆ ಕರೆತರಲಾಯಿತು. ಪ್ರಾಥಮಿಕ ಚಿಕಿತ್ಸೆ ಬಳಿಕ ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

**ಮುಗಿಲು ಮುಟ್ಟಿದ ಆಕ್ರಂಧನ**

ಮನೆಗೆ ಆಧಾರವಾಗಿದ್ದ ಗಿರೀಶ್ ಅವರ ಅಗಲಿಕೆಯಿಂದ ಕುಟುಂಬಸ್ಥರ ಆಕ್ರಂಧನ ಮುಗಿಲು ಮುಟ್ಟಿದೆ. ಯಾರೊಂದಿಗೂ ಜಗಳ ಮಾಡದೆ ತಮ್ಮ ಪಾಡಿಗೆ ತಾವು ಇರುತ್ತಿದ್ದ ಗಿರೀಶ್ ಮಾಡದ ತಪ್ಪಿಗೆ ಪ್ರಾಣ ಕಳೆದುಕೊಳ್ಳುವಂತಾಗಿದೆ. ಘಟನೆಯಿಂದ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬ್ಯಾಂಕ್‌ಗಳಂತೆ ಶಿಕ್ಷಣವೂ ರಾಷ್ಟ್ರೀಕರಣವಾಗಲಿ

## ಸಾಹಿತಿ ಕೆ.ಎಸ್.ಭಗವಾನ್ ಪ್ರತಿಪಾದನೆ | ರಾಜ್ಯ ಮಟ್ಟದ ಕವಿ ಕಾವ್ಯ ಸಂಭ್ರಮ

• ಪ್ರಜೋದಯ ವರದಿ

**ಹಾಸನ:** ದೇಶದ ಪ್ರತಿಯೊಬ್ಬರಿಗೂ ಶಿಕ್ಷಣ ಸಿಗಬೇಕೆಂದರೆ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ರೀತಿ ಶಿಕ್ಷಣವನ್ನು ಮಾಡಬೇಕೆಂದು ಸಾಹಿತಿ ಕೆ.ಎಸ್.ಭಗವಾನ್ ಅವರು ಪ್ರತಿಪಾದಿಸಿದರು.





ನಗರದ ಸಂಸ್ಕೃತ ಭವನದಲ್ಲಿ ಭಾನುವಾರ ಮಾಣಿಕ್ಯ ಪ್ರಕಾಶನದಿಂದ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ 10ನೇ ಕವಿ ಕಾವ್ಯ ಸಂಭ್ರಮ, ಕನ್ನಡ ರಾಜ್ಯೋತ್ಸವ ಹಾಗು ದಶಮಾನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ನೆರವಿನಿಂದ ಶೂದ್ರರು ಇಂದು ಅಕ್ಷರ ಕಲಿಯುವಂತಾಗಿದೆ. ಸಾವಿರಾರು ವರ್ಷಗಳಿಂದ ಶಿಕ್ಷಣವೆಂದರೆ ಕೇವಲ ಮೇಲ್ಜಾತಿಯವರಿಗೆ ಸೀಮಿತ ಎಂಬ ಪರಿಸ್ಥಿತಿ ಇತ್ತು. ಸಂವಿಧಾನ ಜಾರಿಯಾದ ಬಳಿಕ ಆ ಪರಿಸ್ಥಿತಿ ಸ್ವಲ್ಪ ಬದಲಾಗಿದೆ. ಎಲ್ಲರೂ ಸ್ವಾವಲಂಬಿ, ಘನತೆಯ ಬದುಕು ಕಟ್ಟಿಕೊಳ್ಳಬೇಕೆಂದರೆ ಶಿಕ್ಷಣ ಮುಖ್ಯ. ಆದ್ದರಿಂದ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ರೀತಿಯಲ್ಲಿ ಶಿಕ್ಷಣವನ್ನು ಮಾಡಬೇಕೆಂದ ಅವರು, ಬ್ರಿಟಿಷರು ನಮ್ಮ ದೇಶಕ್ಕೆ ಬಾರದೆ ಇದ್ದಿದ್ದರೆ ಎಲ್ಲರಿಗೂ ಶಿಕ್ಷಣ ಪಡೆಯುವ ಅವಕಾಶ ಸಿಗುತ್ತಿರಲಿಲ್ಲವೆಂದು ಅಭಿಪ್ರಾಯಪಟ್ಟರು.

**ದ್ವಿಭಾಷಾ ಸೂತ್ರ ಜಾರಿಯಾಗಲಿ**

ರಾಜ್ಯದಲ್ಲಿ ಮೊದಲ ಭಾಷೆಯಾಗಿ ಕನ್ನಡ ಹಾಗು ದ್ವಿತೀಯ ಭಾಷೆಯಾಗಿ ಇಂಗ್ಲೀಷ್ ಜಾರಿಯಾಗಬೇಕು. ತೃತೀಯ ಭಾಷಾ ಸೂತ್ರಕ್ಕೆ ಯಾವ ಕಾರಣಕ್ಕೂ ಒಪ್ಪಬಾರದರು. ಕನ್ನಡ ಇಲ್ಲಿನ ಮೂಲ ಭಾಷೆಯಾಗಿದ್ದು, ಇಂಗ್ಲೀಷ್ ವ್ಯವಹಾರಿಕವಾಗಿ ಅನಿವಾರ್ಯವಾಗಿದೆ. ಹಿಂದಿ ಕಲಿಯಲೇ ಬೇಕೆಂಬ ಕಡ್ಡಾಯ ನಿಯಮವನ್ನು ಕನ್ನಡಿಗರು ಒಪ್ಪಬಾರದೆಂದರು. ದೇಶದ ಇತಿಹಾಸವನ್ನು ಎಲ್ಲರೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಇನ್ನೊಬ್ಬರನ್ನು ಮೆಚ್ಚಿಸಲು ಬರವಣಿಗೆಯಲ್ಲಿ ತೊಡಗಬಾರದು. ಹೃದಯ ಮತ್ತು ಮನಸ್ಸು ಏನು ಹೇಳುತ್ತದೆಯೋ ಅದನ್ನು ಮಾತ್ರ ಬರೆಯಬೇಕು. ನಮ್ಮ ಬರವಣಿಗೆ ಸತ್ಯ ನಿಷ್ಠವಾಗಿರಬೇಕು. ನಮ್ಮ ಆಲೋಚನೆಗಳನ್ನು ವಿರೋಧಿಸುವವರು ಇದ್ದೇ ಇರುತ್ತಾರೆ. ಸಮಾಜ ಎಂದ ಮೇಲೆ ನಮ್ಮನ್ನು ಪ್ರೀತಿಸುವ ಹಾಗು ದ್ವೇಷಿಸುವ ಜನರು ಇರುತ್ತಾರೆ. ಅದಕ್ಕೆ ತಲೆ ಕೆಡಿಸಿಕೊಳ್ಳದೆ ಸಮಾಜದ ಹಿತಕ್ಕಾಗಿ ಸತ್ಯಕ್ಕಾಗಿ ನಮ್ಮ ಲೇಖನಿ ಬಳಕೆಯಾಗಬೇಕೆಂದರು.

ಈ ದೇಶದಲ್ಲಿ ಶೇ.3 ರಷ್ಟು ಬ್ರಾಹ್ಮಣರಿದ್ದರೆ ಶೇ.97 ರಷ್ಟು ಶೂದ್ರರಿದ್ದಾರೆ. ಆದರೂ ಬ್ರಾಹ್ಮಣರೇ ಎಲ್ಲದರಲ್ಲೂ ಶ್ರೇಷ್ಠ ಎಂಬ ಮನಸ್ಥಿತಿ ನಿರ್ಮಾಣವಾಗಿತ್ತು. ಡಾ.ಬಿ.ಆರ್. ಅಂಬೇಡ್ಕರ್ ಅವರು ಈ ಎಲ್ಲಾ ಶೋಷಣೆಗಳನ್ನು ಅನುಭವಿಸಿ ಕಣ್ಣೀರು ಹಾಕಿದರು. ಭವಿಷ್ಯದ ಪೀಳಿಗೆಗೆ ಅನುಕೂಲ ಮಾಡಿಕೊಡಬೇಕೆಂದು ಅವರು ಸಾಕಷ್ಟು ಹೋರಾಟ ನಡೆಸಿದರು. ಅದರ ಪ್ರತಿಫಲವೇ ನಾವು ಇವತ್ತು ಅಕ್ಷರ ಕಲಿಯುವಂತಾಗಿದೆ ಎಂದು ಹೇಳಿದರು.

ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಪರ ಕಾರ್ಯದರ್ಶಿ ಹೆಚ್.ಬಿ.ಮದನ್ ಗೌಡ ಅವರು ಮಾತನಾಡಿ, ಶಿಕ್ಷಕ ಕೊಟ್ರೇಶ್ ಎಸ್.ಉಪ್ಪಾರ್ ಹಾಗು ದೀಪಾ ಉಪ್ಪಾರ್ ಅವರು ಹತ್ತು ವರ್ಷಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ

» ನಾಲ್ಕನೇ ಪುಟದಲ್ಲಿ

# ಹೆತ್ತ ತಾಯಿ ಮೃತದೇಹ ಬೇಡ ಕಿವಿಯೊಲೆ ಸಾಕು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬದುಕಿದ್ದಾಗ ತಾಯಿಯನ್ನು ನೋಡಿಕೊಳ್ಳದ ಪುತ್ರರು ಆಕೆ ನಿಧನವಾದ ಬಳಿಕ ಕಿವಿಯೊಲೆ ಹಾಗು ಆಧಾರ್ ಕಾರ್ಡ್‌ಗಾಗಿ ಹೊಡೆದಾಡಿಕೊಂಡಿರುವ ಮನಕಲುಕುವ ಘಟನೆ ಪಟ್ಟಣದ ಮಾತೃಭೂಮಿ ವೃದ್ಧಾಶ್ರಮದಲ್ಲಿ ಭಾನುವಾರ ನಡೆದಿದೆ.

ಆಲೂರು ತಾಲ್ಲೂಕು ಕವಳಿಕೆರೆ ಗ್ರಾಮದ ಪಾರ್ವತಮ್ಮ (80) ಮೃತರು. ಮೃತ ಪಾರ್ವತಮ್ಮ ಅವರಿಗೆ ಮೂವರು ಗಂಡು ಹಾಗು ಮೂವರು ಹೆಣ್ಣು ಮಕ್ಕಳಿದ್ದಾರೆ. ಎಲ್ಲರಿಗೂ ಮದುವೆ ಮಾಡಿಕೊಟ್ಟಿದ್ದು, ಒಬ್ಬ ಮಗ ನುಗ್ಗೇಹಳ್ಳಿಯಲ್ಲಿ ವಾಸವಿದ್ದರೆ ಇಬ್ಬರು ಕವಳಿಕೆರೆಯಲ್ಲಿ ಕೃಷಿ ಮಾಡಿಕೊಂಡಿದ್ದಾರೆ. ಮೂವರು ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿದ್ದಾರೆ. ಇಂದ್ರಮ್ಮ ಎಂಬ ಹಿರಿಯ ಮಗಳು ಕಳೆದ 14 ವರ್ಷಗಳಿಂದ ತಾಯಿಯನ್ನು ತಮ್ಮ ಮನೆಯಲ್ಲಿ ಸಾಕಿಕೊಂಡಿದ್ದರು. ಅನಾರೋಗ್ಯ ಹಿನ್ನಲೆ ಯಲ್ಲಿ ಆಸ್ಪತ್ರೆಗೆ ದಾಖಲಾದ ಬಳಿಕ ಅವರೂ ವಾಪಾಸ್ ಕರೆದುಕೊಂಡು ಹೋಗಿರಲಿಲ್ಲ ಎನ್ನಲಾಗಿದೆ.





ಅನಾರೋಗ್ಯ ಹಿನ್ನಲೆಯಲ್ಲಿ ಅ.21 ರಂದು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್‌ಗೆ) ದಾಖಲಾಗಿದ್ದ ಪಾರ್ವತಮ್ಮ ಅವರನ್ನು ಮನೆಗೆ ಕರೆದೊಯ್ಯಲು ಸಂಬಂಧಿಕರು ಬಾರದೆ ಇದ್ದರಿಂದ ಹಿಮ್ಸ್ ಅಧಿಕಾರಿಗಳು ಚನ್ನರಾಯಪಟ್ಟಣದ ಮಾತೃಭೂಮಿ ವೃದ್ಧಾಶ್ರಮಕ್ಕೆ ಕಳುಹಿಸಿಕೊಟ್ಟಿದ್ದರು. ಆದರೆ, ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ವೃದ್ಧೆ ಸರಿಯಾಗಿ ಊಟ ಮಾಡುತ್ತಿರಲಿಲ್ಲ. ಗಂಡು ಮಕ್ಕಳಿಂದ ತನಗಾದ ನೋವು, ಸಂಕಟದೊಂದಿಗೆ ಕಣ್ಣೀರು ಸುರಿಸುತ್ತಾ ಕಾಲ ಕಳೆಯುತ್ತಿದ್ದರು. ನಿದ್ರೆ, ಊಟವಿಲ್ಲದೆ ಬಳಲಿ ಬೆಂಡಾಗಿದ್ದರು. ವೃದ್ಧಾಶ್ರಮದ ನಾಗರಾಜ್ ಹಾಗು ಸಿಬ್ಬಂದಿ ಮುತುವರ್ಜಿ ವಹಿಸಿ ಆರೈಕೆ ಮಾಡುತ್ತಿದ್ದರಾದರೂ ಭಾನುವಾರ ಬೆಳಿಗ್ಗೆ ಅವರು ಕೊನೆಯುಸಿರೆಳೆದಿದ್ದಾರೆ.

ಭಾನುವಾರ ಬೆಳಿಗ್ಗೆ ಪಾರ್ವತಮ್ಮ ಮೃತಪಟ್ಟ ವಿಚಾರ ತಿಳಿಸಲು ಅವರ ಬಳಿಯಿದ್ದ ಆಧಾರ್ ಕಾರ್ಡ್ ವೃದ್ಧಾಶ್ರಮ ಸಿಬ್ಬಂದಿಗೆ ನೆರವಾಗಿದೆ. ಅದರ ನೆರವಿನಿಂದ ಮಕ್ಕಳಿಗೆ ನಿಧನದ ಸುದ್ದಿ ತಿಳಿಸಿದಾಗ ಪುತ್ರರಾದ ಸ್ವಾಮಿ ಮತ್ತು ಮಂಜು ಬಂದಿದ್ದಾರೆ.

# ಇಂದು ಅರಸೀಕೆರೆಗೆ ಸಚಿವ ಕೆ.ಜೆ.

• ಪ್ರಜೋದಯ ವರದಿ

**ಅರಸೀಕೆರೆ:** ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ನ.3ರ ಸೋಮವಾರ ತಾಲ್ಲೂಕು ಪ್ರವಾಸ ಕೈಗೊಂಡಿದ್ದಾರೆ.



ಬೆಳಿಗ್ಗೆ 11 ಗಂಟೆಗೆ ಕಸ್ತೂರ ಬಾ ಹೆಲಿಪ್ಯಾಡ್‌ಗೆ ಬರುವ ಅವರು ತಾಲ್ಲೂಕಿನ ಸಂಕೋಡನಹಳ್ಳಿ ಗ್ರಾಮದಲ್ಲಿ ನಿರ್ಮಿಸ ಲಾಗುತ್ತಿರುವ ಕುಸುಮ್ ಸಿ ಯೋಜನೆಯ ಸೋಲಾರ್ ಪಾರ್ಕ್ ಕಾಮಗಾರಿ ಪರಿಶೀಲಿಸುವರು. ಬೆಳಿಗ್ಗೆ 11.30ಕ್ಕೆ ಅಗ್ಗುಂದ ಗ್ರಾಮದಲ್ಲಿ ನಿರ್ಮಿಸಿರುವ 110/1 ಕೆ.ವಿ.ವಿದ್ಯುತ್ ವಿತರಣಾ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಮಾವು ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ

## ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪತ್ರಕ್ಕೆ ಸ್ಪಂದನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಮಾವು ಬೆಳೆಗಾರರಿಗೆ ಕೊರತೆ ಬೆಲೆ ಪಾವತಿ ಹಾಗು ಮಾರುಕಟ್ಟೆ ಮಧ್ಯಸ್ಥಿಕೆ ವಹಿಸುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಮನವಿಗೆ ಕೇಂದ್ರ ಸರ್ಕಾರ ಸ್ಪಂದಿಸಿದೆ.



ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಹೆಚ್.ಡಿ.ದೇವೇಗೌಡರಿಗೆ ಪತ್ರ ಬರೆದು 202526ನೇ ಮಾರುಕಟ್ಟೆ ಋತುವಿನಲ್ಲಿ ಬೆಲೆ ಕೊರತೆ ಪಾವತಿ ಯೋಜನೆಯಡಿ ಕ್ವಿಂಟಾಲ್‌ಗೆ 1,616 ರೂ. ಮಾರುಕಟ್ಟೆ ಹಸ್ತಕ್ಷೇಪ ಬೆಲೆಯಲ್ಲಿ 2.5 ಲಕ್ಷ ಮೆಟ್ರಿಕ್ ಟನ್ ಹಣ್ಣಿನ ಖರೀದಿಗೆ ಅನುಮೋದಿಸಿದೆ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಜೂನ್ 22 ರಂದು ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆಯಲಾಗಿತ್ತು. ಕರ್ನಾಟಕದ ಮಾವು ಬೆಳೆಗಾರರನ್ನು ಬೆಂಬಲಿಸಲು ಕೇಂದ್ರ ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಬೇಕು. ಕಡಿಮೆ ಇಳುವರಿ, ಹವಾಮಾನ ವೈಪರಿತ್ಯ ಮತ್ತು ಮಾವಿನ ಹಣ್ಣಿನ ಅಂತಾರಾಜ್ಯ ಸಾಗಣೆಯ ಮೇಲಿನ ನಿರ್ಬಂಧಗಳಿಂದ ಉಂಟಾದ ತೀವ್ರ ಬೆಲೆ ಕುಸಿತದ ಬಗ್ಗೆ ದೇವೇಗೌಡರು ಉಲ್ಲೇಖಿಸಿದ್ದರು. ಈ ಸಮಸ್ಯೆಗಳಿಂದ ವಿಶೇಷವಾಗಿ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಮಾವು ಬೆಳೆಗಾರರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು. ಮುಂದಿನ ದಿನಗಳಲ್ಲಿಯೂ ಇಂತಹುದೇ ಸಮಸ್ಯೆ ಬರುವ ಸಾಧ್ಯತೆ ಇರುವುದರಿಂದ ತಾವು ಬೆಳೆಗಾರರ ನೆರವಿಗೆ ಬರಬೇಕೆಂದು ಕೋರಿದ್ದರು.

# ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ : ಸಚಿವ ಜಮೀರ್

• ಪ್ರಜೋದಯ ವರದಿ





**ಬೆಂಗಳೂರು:** ರಾಜ್ಯದಲ್ಲಿ ಮುಖ್ಯ ಮಂತ್ರಿ ಹಾಗು ಪಕ್ಷದ ಅಧ್ಯಕ್ಷ ಸ್ಥಾನದ ಹುದ್ದೆಗಳು ಖಾಲಿ ಇಲ್ಲ. 2028ರ ತನಕ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರುತ್ತಾರೆ. ಬಳಿಕ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೇನ್ನುವ ಆಸೆ ನನ್ನದು ಎಂದು ವಕ್ಫ್ ಮತ್ತು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಕೊಪ್ಪಳದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಆಗಬೇಕೇನ್ನುವ ಆಸೆ ಎಲ್ಲರಿಗೂ ಇರುತ್ತದೆ. ಶಿವಕುಮಾರ್ ಅವರ ಅಭಿಮಾನಿಗಳು ಕೂಡ ಆಸೆ ಇಟ್ಟುಕೊಂಡಿದ್ದಾರೆ. ಸಿದ್ದರಾಮಯ್ಯ ಅವರಿಗೆ ಎಲ್ಲಾ ಶಾಸಕರ ಬೆಂಬಲವಿದ್ದು, ಪೂರ್ಣ ಅವಧಿಗೆ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ. ಈ ಕುರಿತು ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ ಎಂದು ಹೇಳಿದರು.

ಶಿವಕುಮಾರ್ ಅಪಾರ ದೈವಭಕ್ತರಾಗಿದ್ದು, ಮೊದಲಿನಿಂದಲೂ ದೇವಸ್ಥಾನಗಳಿಗೆ ಹೋಗುವುದು ಸಾಮಾನ್ಯ. ಅವರು ದೇವಸ್ಥಾನಕ್ಕೆ ಹೋಗುವುದಕ್ಕೂ ಮುಖ್ಯಮಂತ್ರಿ ಸ್ಥಾನದ ಪೈ ಪೋಟಿಗೂ ಸಂಬಂಧವಿಲ್ಲ. ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ. ಇದೆಲ್ಲವೂ ಬಿಜೆಪಿ ಸೃಷ್ಟಿ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಳಲಾದ ಪ್ರಶ್ನೆಗೆ ವಿಸ್ತರಣೆ ಆಗಬಹುದು. ಪಕ್ಷ ಸೂಚಿಸಿದರೆ ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧನಿದ್ದೇನೆ. ಶಿಸ್ತಿನ ಸಿಪಾಯಿಯಾಗಿ ಪಕ್ಷದ ಕೆಲಸ ಮಾಡುತ್ತೇನೆ. ಬಿಜೆಪಿಯಲ್ಲಿ ಮೊದಲು ಎರಡು ಗುಂಪುಗಳಷ್ಟೇ ಇದ್ದವು. ಈಗ ಬಿ.ವೈ. ವಿಜಯೇಂದ್ರ, ಆರ್. ಅಶೋಕ್, ಬಸನಗೌಡ ಪಾಟೀಲ ಯತ್ನಾಳ್, ಕೆ.ಎಸ್.ಈಶ್ವರಪ್ಪ ಹೀಗೆ ಎಲ್ಲರವೂ ಪ್ರತ್ಯೇಕ ಗುಂಪುಗಳಾಗಿವೆ. ಅವರು ಮೊದಲು ಈ ಭಿನ್ನಾಭಿಪ್ರಾಯ ಪರಿಹರಿಸಿಕೊಂಡು ನಮ್ಮ ಬಗ್ಗೆ ಮಾತನಾಡಲಿ ಎಂದರು.

# ಸತೀಶ್ ದೆಹಲಿ ಭೇಟಿ ತಪ್ಪಾಗಿ ಅರ್ಥೈಸುವುದು ಬೇಡ :ಡಿ.ಕೆ.ಶಿ.

• ಪ್ರಜೋದಯ ವರದಿ

**ಬೆಂಗಳೂರು :** ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ದೆಹಲಿಗೆ ಭೇಟಿ ನೀಡುತ್ತಿರುವುದನ್ನು ತಪ್ಪಾಗಿ ಅರ್ಥೈಸುವ ಅಗತ್ಯವಿಲ್ಲ. ಎಲ್ಲಾ ಪ್ರವಾಸಗಳು ರಾಜಕೀಯ ಕಾರಣಕ್ಕಾಗಿಯೇ ನಡೆಯುವುದಿಲ್ಲ. ತಾವು ಕೂಡ ದೆಹಲಿಗೆ ಭೇಟಿ ನೀಡುತ್ತಿರುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸತೀಶ್ ಜಾರಕಿಹೊಳಿ ಇಲಾಖೆಯ ಕಾರಣಗಳಿಗಾಗಿಯೂ ದೆಹಲಿಗೆ ಭೇಟಿ ನೀಡಬಹುದು. ಅಲ್ಲಿರುವ ಕಾಂಗ್ರೆಸ್ ಕಚೇರಿ ನಮಗೆ ದೇವಸ್ಥಾನವಿದ್ದಂತೆ. ದೆಹಲಿಗೆ ಹೋದ ಮೇಲೆ ಪಕ್ಷದ ಕಚೇರಿಗೆ ಹೋಗುವುದು ವರಿಷ್ಠರನ್ನು ಭೇಟಿ ಮಾಡುವುದು ಸಾಮಾನ್ಯ. ಇದನ್ನು ಬೇರೆ ರೀತಿ ವ್ಯಾಖ್ಯಾನಿಸುವ ಅಗತ್ಯ ಇಲ್ಲ ಎಂದರು.

ಸಚಿವರು, ಶಾಸಕರು ಸೇರಿ

» ನಾಲ್ಕನೇ ಪುಟದಲ್ಲಿ

# ಮೌಲ್ಯಯುತ ಶಿಕ್ಷಣದಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡಿದರೆ ಮಾತ್ರ ಭವಿಷ್ಯದಲ್ಲಿ ಉತ್ತಮ ಸಮಾಜ ನಿರ್ಮಿಸಲು ಸಾಧ್ಯವೆಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಹೇಳಿದರು.



ತಾಲ್ಲೂಕಿನ ಕಬ್ಬಳಿ ಶ್ರೀ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ಬಸವೇಶ್ವರಸ್ವಾಮಿ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ ಶನಿವಾರ ರಾತ್ರಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣವು ಸಮಾಜದ ಬದಲಾವಣೆಯ ದಿಕ್ಸೂಚಿ ಎಂದು ಆಶೀರ್ವಚನ ನೀಡಿದರು.

ಶಾಲೆಯಲ್ಲಿ ಸಿಗುವ ಮೌಲ್ಯಯುತ ಶಿಕ್ಷಣದ ಜೊತೆಗೆ ಮನೆಯಲ್ಲಿ ಪಾಲಕರು ನೀಡುವ ಸಂಸ್ಕಾರವು ಮಕ್ಕಳ ಬದುಕಿನ ಭವಿಷ್ಯಕ್ಕೆ ದಾರಿ ದೀಪವಾಗಲಿದೆ. ಸಂಸ್ಕಾರವಿಲ್ಲದ ಕೇವಲ ಶಿಕ್ಷಣ ಸಿಕ್ಕರೆ ಯಾವುದೇ ಪ್ರಯೋಜನವಾಗುವುದಿಲ್ಲ. ಯಾವುದೇ ವ್ಯಕ್ತಿಯ ಧರ್ಮ, ಜಾತಿ ಹಾಗೂ ಧರಿಸಿರುವ ಬಟ್ಟೆಯನ್ನು ನೋಡಿ ಅಳೆಯಬಾರದು. ಮೌಲ್ಯಯುತ ಗುಣಗಳು ಹಾಗೂ ಮಾನವೀಯತೆಯ ವ್ಯಕ್ತಿತ್ವವನ್ನು ಗುರುತಿಸಿ ಗೌರವ ನೀಡಬೇಕು. ಅದೆಷ್ಟೇ ಹಣ ಮತ್ತು ಜಾತಿ ಸಂಪಾದಿಸಿದರೂ ಧರ್ಮ ಕಾರ್ಯಗಳಿಗೆ ವಿನಿಯೋಗವಾಗದಿದ್ದರೆ ಅದು ವ್ಯರ್ಥವೇ ಸರಿ ಎಂದು ತಿಳಿಸಿದರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ.ಎ.ಟಿ. ಶಿವರಾಮ್ ಮಾತನಾಡಿ, ಮೌಲ್ಯಾಧಾರಿತ ಶಿಕ್ಷಣ ಸಿಗದೇ ಶೈಕ್ಷಣಿಕ ವ್ಯವಸ್ಥೆ ಪೂರ್ಣಗೊಳ್ಳುವುದಿಲ್ಲ. ಬದುಕು ಸಹ ಮಧ್ಯಾಂತರದಲ್ಲಿ ತಟಸ್ಥವಾಗಿ ನಿಲ್ಲಲಿದೆ. ಆದ್ದರಿಂದ ಗುಣಮಟ್ಟದ ಮೌಲ್ಯಯುತ ಶಿಕ್ಷಣದ ಜೊತೆಗೆ ಸಂಸ್ಕಾರ ಸಿಕ್ಕರೆ ವಿದ್ಯಾರ್ಥಿಗಳ ಬದುಕು ಹಸನಾಗಲು ಸಾಧ್ಯ ಎಂದರು.

2024-25 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವ್ಯಾಪ್ತಿಯ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು. ನಂತರ ಶ್ರೀ ಬಸವೇಶ್ವರಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀಕ್ಷೇತ್ರ ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಗುಡಿಗೌಡ ಪ್ರಕಾಶ್, ಸಿಆರ್ ಸಿ ಅನಿಲ್, ಇಸಿಓ ಶ್ರೀನಿವಾಸ್, ಮುಖ್ಯಶಿಕ್ಷಕ ಟಿ.ತಿಮ್ಮೇಗೌಡ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶಿವನಂಜೇಗೌಡ, ಎನ್.ಆರ್. ರತ್ನರಾಜ್, ಪ್ರಮುಖರಾದ ಹೊನ್ನೇಗೌಡ, ಶಿಕ್ಷಕ ವೃಂದ, ಪಾಲಕರು ಇತರರು ಇದ್ದರು.

ಇಂದಿನ ಕಾರ್ಯಕ್ರಮಗಳು: ನ.3 ಸೋಮವಾರ ಬೆಳ್ಳಿಗ್ಗೆ ಚುಂಚಶ್ರೀಗಳ ದಿವ್ಯಸಾನಿಧ್ಯದಲ್ಲಿ ಬೆಂಗಳೂರಿನ ಉದ್ಯಮಿ ಪ್ರದೀಪಾ ವೆಂಕಟೇಶ ಪ್ರಸಾದ್ ಕುಟುಂಬದವರಿಂದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ನೆರವೇರಲಿದೆ. ಸಂಜೆ ಸುಮಾರಿಗೆ ಶ್ರೀ ಬಸವೇಶ್ವರಸ್ವಾಮಿ ಸರ್ಪೋತ್ಸವ, ಶ್ರೀ ಚೌಡೇಶ್ವರಿದೇವಿ ಉತ್ಸವ, ಜಗದ್ಗುರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಪುತ್ಥಳಿಕೆ, ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಮುತ್ತಿನ ಪಲ್ಲಕ್ಕಿ ಉತ್ಸವದ ನಂತರ ದೇಗುಲದ ಆವರಣದಲ್ಲಿರುವ ಪುಷ್ಕರಣಿಯಲ್ಲಿ ಚುಂಚಶ್ರೀಗಳ ತೆಪ್ಪೋತ್ಸವ ವೈಭವದಿಂದ ಸಾಗಲಿದೆ. ಧಾರ್ಮಿಕ ಸಭೆ ಹಾಗೂ ಚುಂಚಶ್ರೀಗಳಿಗೆ ಪುಷ್ಪ ವೃಷ್ಟಿ ನಡೆಯಲಿದೆ.

# ಜಾಗದ ವಿಚಾರಕ್ಕೆ ಮಚ್ಚಿನಿಂದ ಹಲ್ಲೆ

• ಪ್ರಜೋದಯ ವರದಿ

**ಸಕಲೇಶಪುರ:** ಮನೆ ಪಕ್ಕದ ಜಾಗದ ವಿಚಾರವಾಗಿ ಸಂಬಂಧಿಯೇ ಯುವಕನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಕಾಲ್ಗನೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಚಿನ್ನಿ ಎಂಬುವವರ ಮಗ ಸತ್ಯ ಅವರ ಮೇಲೆ ಚಂದ್ರಶೇಖರ್ ಎಂಬಾತ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ.

ಎರಡು ಕುಟುಂಬಗಳ ಮನೆ ಅಕ್ಕಪಕ್ಕದಲ್ಲೇ ಇದ್ದು ಜಾಗದ ವಿಚಾರಕ್ಕೆ ವೈಮನಸ್ಸಿತ್ತು. ಶನಿವಾರ ಚಂದ್ರಶೇಖರ್ ಚಿನ್ನಿ ಹಾಕಿದ್ದ ಬೇಲಿಯನ್ನು ಮಚ್ಚಿನಿಂದ ತೆರವು ಮಾಡುತ್ತಿದ್ದಾಗ ಅಲ್ಲಿಗೆ ಬಂದ ಸತ್ಯ ಪ್ರಶ್ನಿಸಿದ್ದಾರೆ. ಆಕ್ರೋಶ ಗೊಂಡ ಚಂದ್ರಶೇಖರ್ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಕೈಯಲ್ಲಿದ್ದ ಮಚ್ಚಿನಿಂದ ಬಲ ಗೈಗೆ ಹೊಡೆದಿದ್ದಾನೆ. ಗಲಾಟೆ ವಿಷಯ ನೋಡಿದ ಚಿನ್ನಿ ಅವರು ಜೋರಾಗಿ ಕಿರುಚಿದ್ದರಿಂದ ಅಕ್ಕಪಕ್ಕದ ಮನೆಯವರು ದೌಡಾಯಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಗಂಭೀರ ಗಾಯ ಗೊಂಡಿರುವ ಸತ್ಯ ಅವರನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕನ್ನಡದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆಯೇ?

**ಕ**ನ್ನಡದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆಯೇ? ಇದಕ್ಕೆ ಉತ್ತರವಾಗಿ ಸಂಖ್ಯೆ ಜಾಸ್ತಿಯಿದ್ದುದಾದರೂ ಯಾವಾಗ ಎಂದು ಕೇಳಬಹುದು. ನಿಜ, ಕನ್ನಡದಲ್ಲಿ ವಿಮರ್ಶೆ ಯೆಂಬ ಸಾಹಿತ್ಯ ಪ್ರಕಾರ ಶುರುವಾದ್ದೇ ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ, ಎಂದರೆ 1960ರ ದಶಕದಲ್ಲಿ. ಅದಕ್ಕೆ ಮೊದಲಿನ ವಿಮರ್ಶೆಯೆಲ್ಲವೂ ಪ್ರಿ-ಕ್ರಿಟಿಕಲ್ (ವಿಮರ್ಶಾ ಪೂರ್ವ) ಹಂತಕ್ಕೆ ಸೇರಿದ ಬರಹಗಳೆ.ದು ಗುರುತಿಸಬಹುದಾದ್ದು. ಇದೊಂದು ರೀತಿಯ ಟ್ಯಾಕ್ಸಾನಮಿಯ ಅರ್ಥಾತ್ ವರ್ಗೀಕರಣದ ಪ್ರಯತ್ನ. ಪಠ್ಯವೊಂದು ಕವಿತೆಯೇ ಅಲ್ಲವೇ, ಕವಿತೆಯಾಗಿದ್ದರೆ ಅದು ಯಾವ ಪ್ರಕಾರಕ್ಕೆ ಸೇರಿದ್ದು, ಪ್ರಾಸ, ಲಯ, ಅಲಂಕಾರ ವಿಧಾನಗಳೇನು ಹಾಗೂ ಇದನ್ನು ಬರೆದ ಕವಿಯ ಪರಿಚಯವೇನು ಎಂಬಿತ್ಯಾದಿ ಪ್ರಶ್ನೆಗಳು ಇಲ್ಲಿ ಎತ್ತಲ್ಪಡುತ್ತವೆ. ಸಾಹಿತ್ಯ ವಿಮರ್ಶೆಯ ಆಗಮನಕ್ಕೆ ಈ ಪೂರ್ವ ಹಂತವು ಅಗತ್ಯವಾದರೂ ವಿಮರ್ಶೆ ಇಲ್ಲಿಗೆ ನಿಲ್ಲುವುದಿಲ್ಲ ಅಥವಾ ಇಂಥಹ ಪ್ರಶ್ನೆಗಳು ಕೆಲವೊಮ್ಮೆ ಗೌಣವೂ ಆಗಬಹುದು. ನಾವಿಂದು ಸಾಹಿತ್ಯ ವಿಮರ್ಶೆಯೆಂದು ಗುರು ತಿಸುವ ಪಠ್ಯ ರೀತಿ ನವ್ಯ ಸಾಹಿತ್ಯದ ಕಾಲದಲ್ಲಿ ಆಧುನಿಕ ಪ್ರಜ್ಞೆಯ ಅಂಗವಾಗಿ ಹುಟ್ಟಿ ಕೊಂಡದ್ದಾದರೂ, ಇದಕ್ಕೆ ಕೆಲವು ವರ್ಷಗಳ ಮುನ್ನವೇ ಅ.ನ.ಕೃ., ನಿರಂಜನ, ತ.ರಾ.ಸು., ಬಸವರಾಜ ಕಟ್ಟೀಮನಿ ಮುಂತಾದವರು ಭಾಗವಹಿಸಿದ್ದ ಪ್ರಗತಿಶೀಲ ಚಳುವಳಿ ಕೂಡಾ ಸಾಹಿತ್ಯವನ್ನು ನಾವು ನೋಡುವ ರೀತಿಯನ್ನು ಬದಲಿಸಿತು ಎನ್ನುವುದನ್ನು ಇಲ್ಲಿ ನೆನೆದು ಕೊಳ್ಳಬೇಕಾಗುತ್ತದೆ. ಪಗತಿಶೀಲತೆ ಸಹಾ ಸಾಹಿತ್ಯ ಚರ್ಚೆಯನ್ನು ಟ್ಯಾಕ್ಸಾನಮಿಗಿಂತ ಮುಂದಕ್ಕೆ ತೆಗೆದುಕೊಂಡು ಹೋಯಿತು-ಸಾಹಿತ್ಯದ ಓದನ್ನು ಸಮಾಜದ ವಿಶ್ಲೇಷಣೆಯಾಗಿ ಮಾರ್ಪ ಡಿಸಿದವರೇ ಪ್ರಗತಿಶೀಲರು.




ಆದರೂ ಸಾಹಿತ್ಯ ವಿಮರ್ಶೆ ವಿಪುಲವಾಗಿ ಬೆಳೆದುದು ನವ್ಯದ ಸಂದರ್ಭದಲ್ಲೇ. ಎಂ.ಜಿ. ಕೃಷ್ಣಮೂರ್ತಿ, ಯು.ಆರ್.ಅನಂತಮೂರ್ತಿ, ಶಾಂತಿನಾಥ ದೇಸಾಯಿ. ಜಿ.ಎಚ್.ನಾಯಕ, ಸುಮತೀಂದ್ರ ನಾಡಿಗ, ಪಿ.ಲಂಕೇಶ್, ಬಿ. ದಾಮೋದರ ರಾವ್, ಗಿರಡ್ಡಿ ಗೋವಿಂದರಾಜ್ ಮೊದಲಾದವರ ಹೆಸರು ಇಲ್ಲಿ ಉಲ್ಲೇಖನೀಯ. ಹೊಸತೊಂದು ಕೃತಿ ಬಂದರೆ ಅದನ್ನು ವಿಮರ್ಶಿಸಲು ವಿಮರ್ಶಕರ ತಂಡವೇ ಸಿದ್ಧವಿತ್ತು. ಇಂಥ ವಿಮರ್ಶೆಗಳು ಮುಖ್ಯವಾಗಿ ವಿಚಾರ ಸಂಕೀರ್ಣಗಳಲ್ಲಿ ಓದುವ ಪ್ರಬಂಧಗಳ ಹಾಗೂ ತದನಂತರದ ಚರ್ಚೆಯ ರೂಪದಲ್ಲಿದ್ದು, ಇವು ಕೆಲವೊಮ್ಮೆ ಅಡಿಗರ ಸಾಕ್ಷಿಯಲ್ಲಿ ಅಥವಾ ಪತ್ಯೇಕವಾಗಿ ಪುಸ್ತಕರೂಪದಲ್ಲಿ ಪ್ರಕಟಗೊಳ್ಳುತ್ತಿ ದ್ದುವು. ಗಮನಿಸಬೇಕಾದ ಅಂಶವೆಂದರೆ ಇಂಥಹ ಹಲವರು ತಮ್ಮನ್ನು ವಿಮರ್ಶಕರೆಂದು ಗುರುತಿಸಿಕೊಳ್ಳದಿದ್ದರೂ ಈ ಸಾಹಿತ್ಯ ಕಾಯಕದಲ್ಲಿ ತೊಡಗಿರುತ್ತಿದ್ದುದು. ಅದರಲ್ಲಿ ಅನಂತ ಮೂರ್ತಿಯವರದ್ದು ಒಂದು ಮಾದರಿ ನಿದರ್ಶನ: ಅನಂತಮೂರ್ತಿಯವರು ಕವಿ, ಕತೆಗಾರ, ಕಾದಂಬರಿಕಾರರೆಂದೇ ಪ್ರಸಿದ್ಧರಾಗಿದ್ದರೂ, ನವ್ಯ ಸಾಹಿತ್ಯವನ್ನು ಅದರಲ್ಲೂ ಗೋಪಾಲಕೃಷ್ಣ ಅಡಿಗರ ಕವಿತೆಗಳನ್ನು-ಹೊಸ ಜನಾಂಗದ ಓದಿಗೆ ಒಗ್ಗಿಸುವ ಆಗಿನ ಕಾಲದ ಅತ್ಯಗತ್ಯದ ಕೆಲಸವನ್ನು ಮಾಡಿದರು. ಇದೊಂದು ರೀತಿಯಲ್ಲಿ ಇಂಗ್ಲಿಷ್‌ನಲ್ಲಿ ಟಿ.ಎಸ್.ಎಲಿಯಟ್ ಮಾಡಿದ ಕೆಲಸಕ್ಕೆ ಸಮನಾದುದು. ಸೃಜನಶೀಲ ಲೇಖಕರಾಗಿದ್ದು, ವಿಮರ್ಶೆಯ ಆಕರ್ಷಣೆಗೆ ಒಳಗಾಗಿ ಅದರಲ್ಲೇ ಮುಂದುವರಿದವರೂ ಇದ್ದಾರೆ. ಉದಾಹರಣೆಗೆ, ಕತೆಗಾರರಾಗಿ ಸಾಹಿತ್ಯ ಜೀವನ ಆರಂಭಿಸಿ ನಂತರ ವಿಮರ್ಶೆಯಲ್ಲೇ ಪ್ರಧಾನ ಕೊಡುಗೆ ನೀಡಿದ ಗಿರಡ್ಡಿ ಗೋವಿಂದರಾಜ್.

ಕನ್ನಡದ ಸುಪ್ರಸಿದ್ಧ ವಿಮರ್ಶಕರಾಗಿದ್ದ ಎಂ.ಜಿ.ಕೃಷ್ಣಮೂರ್ತಿ, ಕೀರ್ತಿನಾಥ ಕುರ್ತ ಕೋಟಿ ಮತ್ತು ಡಿ.ಆರ್.ನಾಗರಾಜ್ ಈಗಿಲ್ಲ. ಹಿರಿಯ ತಲೆಮಾರಿಗೆ ಸೇರಿದ ಜಿ. ಎಸ್.ಆಮೂರರು ಆರಂಭದಲ್ಲಿ ಇಂಗ್ಲೀಷ್‌ನಲ್ಲೇ ಕೆಲಸ ಮಾಡುತ್ತಿದ್ದರೂ ನಂತರದ ದಿನಗಳಲ್ಲಿ ಅವರ ಈ ಇಂಗ್ಲಿಷ್ ವಿಮರ್ಶೆಯ ಅನುಭವ ಕನ್ನಡಕ್ಕೆ ದೊರಕುವಂತಾಯಿತು. ಆಮೂರರಿಗಿಂತ ಕಿರಿಯರ ಸಾಲಿನಲ್ಲೀಗ ಸಿ.ಎನ್.ರಾಮಚಂದ್ರನ್, ಕೆ.ವಿ.ನಾರಾಯಣ, ಕಿ.ರಂ. ನಾಗರಾಜ್, ಎಚ್.ಎಸ್. ರಾಘವೇಂದ್ರ ರಾವ್, ಜಿ.ಎನ್. ರಂಗನಾಥರಾವ್, ನರಹಳ್ಳಿ ಬಾಲ ಸುಬ್ರಮಣ್ಯ, ಟಿ.ಪಿ. ಅಶೋಕ, ರಾಜೇಂದ್ರ ಚೆನ್ನಿ, ಬಸವರಾಜ್ ಕಲ್ಗುಡಿ, ಡಿ.ಎಸ್. ನಾಗಭೂಷಣ, ಕೇಶವ ಶರ್ಮ ಮುಂತಾದವ ರಿದ್ದಾರೆ. ಆದರೆ ಇವರೂ ಸದ್ಯ ಹಿರಿಯರ ಸಾಲಿಗೆ ಸೇರಿದವರೇ. ಇವರ ನಂತರದ ಪೀಳಿ ಗೆಯಲ್ಲಿ ಎಸ್.ಆರ್.ವಿಜಯಶಂಕರ್, ಕೆ.ಸತ್ಯನಾರಾಯಣ, ಬಸವರಾಜ್ ಸಬರದ ಮುಂತಾದವರು ವಿಮರ್ಶಾಪ್ರಜ್ಞೆಯನ್ನು ಬೆಳೆಸುವ ಕೆಲಸ ಮಾಡುತ್ತಿದ್ದಾರೆ. (ನಾನಿಲ್ಲಿ ಎಲ್ಲರನ್ನೂ ಹೆಸರಿಸಲಾರದ್ದಕ್ಕೆ ಕ್ಷಮೆಯಿರಲಿ.) ಆದರೆ ಮುಂದೆ ನೋಡಿದಾಗ ಹೆಚ್ಚೇನೂ ಗೋಚರಿಸುವುದಿಲ್ಲ. ನನ್ನ ನಂತರ ಪ್ರಳಯ ಎಂಬ ಧೋರಣೆಯಿಂದ ಈ ಮಾತನ್ನು ಹೇಳುತ್ತಿಲ್ಲ. ವಿಮರ್ಶಕರು ಬಂದೇ ಬರುತ್ತಾರೆ ನಿಜ. ಆದರೂ ಪ್ರಬುದ್ಧವಾದ ವಿಮರ್ಶೆಗೆ ಪ್ರೋತ್ಸಾಹಕರವಲ್ಲದ ವಾತಾವರಣವೊಂದು ಸಾರ್ವತ್ರಿಕವಾಗಿ ನಿರ್ಮಾಣವಾಗುತ್ತಿರುವಂತೆ ಅನಿಸುತ್ತದೆ. ವಿಮರ್ಶೆಗೆ ಆಳವೂ ಹರವೂ ಆದ ಅಧ್ಯಯನ, ಬಹುಭಾಷಾ ಪಾಂಡಿತ್ಯ, ಕಾಲಾವಕಾಶ ಅಗತ್ಯ. ಕನಿಷ್ಠ ಸಾಹಿತ್ಯದ ಕುರಿತಾದ ಪ್ಯಾಶನ್ ಆದರೂ ಲೇಖಕನಿಗೆ ಬೇಕಾಗುತ್ತದೆ. ಮಾಹಿತಿ ತಂತ್ರ ಜ್ಞಾನದ ಇಂದಿನ ಯುಗದಲ್ಲಿ ಇದಕ್ಕೆಲ್ಲ ಅನುವು ಗಳು ಎಲ್ಲಿ? ಭಾಷೆ ಹಾಗೂ ಸಾಹಿತ್ಯದಲ್ಲಿ ಆಸಕ್ತಿ ಯಿರುವವರು ಕಡಿಮೆಯಾಗಿದ್ದಾರೆ. ಪುಸ್ತಕ ವೊಂದನ್ನು ಆರಂಭದಿಂದ ಕೊನೆತನಕ ಒಮ್ಮೆ ಕೂಡಾ ಓದಲು ಸಮಯ ವಿಲ್ಲ ದಿರುತ್ತ, ಮತ್ತೆ ಮತ್ತೆ ಓದಿ ಮನನ ಮಾಡುವವರು ಯಾರಿದ್ದಾರೆ?

ನಮ್ಮ ಪತ್ರಿಕೆಗಳಲ್ಲಿ ಕಳೆದ ಒಂದು ದಶಕದಿಂದ ನಡೆದ ಬದಲಾವಣೆಗಳು ಸದ್ಯದ ಸ್ಥಿತಿಗೆ ಒಂದು ನಿದರ್ಶನ ವಾಗಬಹುದು. ಕೆಲವು ವರ್ಷಗಳ ಹಿಂದೆ ಪತ್ರಿಕೆಗಳ ಭಾನುವಾರ ಪುರವ ಣಿಗಳು ಸಾಹಿತ್ಯ ವಿಮರ್ಶೆಗೆ ಹಾಗೂ ಸಂವಾದಗಳಿಗೆ ಸಾಕಷ್ಟು ಸ್ಥಳಾವಕಾಶ ಕಲ್ಪಿಸುತ್ತಿದ್ದುವು. 1970ರಲ್ಲಿ ಪಿ. ಲಂಕೇಶ್ ಸಂಪಾದಿಸಿ ಅಕ್ಷರ ಪ್ರಕಾಶನದಿಂದ ಪ್ರಕಟಿತವಾದ ಅಕ್ಷರ ಹೊಸ ಕಾವ್ಯದ ಕುರಿತಾಗಿ ಕನ್ನಡ ಪ್ರಭ ಪತ್ರಿಕೆಯಲ್ಲಿ ಸುದೀರ್ಘವಾಗಿ ನಡೆದ ವಾದ ವಿವಾದಗಳೇ ಇದಕ್ಕೆ ಸಾಕ್ಷಿ. ಆಗ ಅಂಥ ಚರ್ಚೆ ನಡೆ ದುದು ಯಾವುದೇ ರಾಜಕೀಯ ಕಾರಣಗಳಿಂದ ಅಲ್ಲ- ಸಾಹಿತ್ಯದ ಮೇಲಿನ ಆಸಕ್ತಿಯಿಂದ ಮಾತ್ರ. ಸದ್ಯ ಇಂಥದೊಂದು ಚರ್ಚೆ ಎಸ್. ಎಲ್. ಭೈರಪ್ಪನವರ ಕಾದಂಬರಿ ಆವರಣದ ಕುರಿತಾಗಿ ನಡೆದರೂ, ಅದು ರಾಜಕೀಯ ಪ್ರೇರಿತವಾದ್ದಲ್ಲದೆ ಸಾಹಿತ್ಯ ಪ್ರೀತಿ ಯಿಂದ ಅಲ್ಲ. ಬಹುಶಃ ಆ ಕಾದಂಬರಿಯೇ ರಾಜಕೀಯವಾದ್ದರಿಂದ ಅದು ಹಾಗಾದ್ದಿರಬಹುದು. ಆದರೆ ಪ್ರಶ್ನೆಯೆಂದರೆ, ರಾಜಕೀಯ ಮಹತ್ವವಿಲ್ಲದ ಸಾಹಿತ್ಯ ಕೃತಿ ಯೊಂದರ ಬಗ್ಗೆ ಇಷ್ಟೊಂದು ಪುಟಗಳನ್ನು ಪತ್ರಿಕೆಗಳು ನೀಡಲು ತಯಾರಿವೆಯೇ ಎನ್ನುವುದು. ಹಿಂದೆ ಪುಸ್ತಕ ವಿಮರ್ಶೆಯೆನ್ನುವುದು ಸಾಕಷ್ಟು ದೀರ್ಘವಾ ಗಿದ್ದು ಅದಕ್ಕೆ ಸಾಹಿತ್ಯ ವಿಮರ್ಶೆಯ ಮಹತ್ವ ದೊರಕುತ್ತಿತ್ತು. ಈಗಲಾದರೆ ಪತ್ರಿಕಾಲೇಖನ ಗಳೆಲ್ಲ ಕುಬ್ಜವಾಗುತ್ತ ಬಂದು ಪುಸ್ತಕ ವಿಮರ್ಶೆ ಕೇವಲ ಪುಸ್ತಕ ಪರಿಚಯವಾಗುತ್ತಿದೆ. ಅದಕ್ಕೂ ಪತ್ರಕರ್ತರ ವಶೀಲಿ ಮಾಡ ಬೇಕಾಗುತ್ತದೆ ಎಂಬ ವದಂತಿಯೂ ಇದೆ! ತಿಂಗಳಿಗೆ ಒಮ್ಮೆಯಾದರೂ ಟೈಮ್ಸ್ ಲಿಟರರಿ ಸಪ್ಲಿಮೆಂಟಿನಂಥ ಪುರವಣಿ ಯೊಂದನ್ನು ತನ್ನಿ ಎಂದು ಎಷ್ಟು ವಿನಂತಿಸಿ ಕೊಂಡರೂ ಪತ್ರಿಕೆಗಳು ಇಂಥ ಸಾಹಸಕ್ಕೆ ಕೈಯಿಕ್ಕುತ್ತಿಲ್ಲ.

ಇದಕ್ಕೆಲ್ಲ ಪತ್ರಿಕೆಗಳ ಉತ್ತರವೆಂದರೆ ಗಂಭೀರವೂ ಸುದೀರ್ಘವೂ ಆದ ಸಾಹಿತ್ಯಿಕ ಲೇಖನ ಗಳನ್ನು ಜನ ಓದುವುದಿಲ್ಲ ಎನ್ನುವುದು. ಇದು ವಾಸ್ತವವೇ ಆಗಿರಬಹುದು. ಆದ್ದರಿಂದ ಪತ್ರಿಕೆಗಳನ್ನು ದೂರಿ ಪ್ರಯೋಜನವೂ ಇಲ್ಲ. ಮುದ್ರಣ ಮಾಧ್ಯಮಗಳು ದೃಶ್ಯ ಮಾಧ್ಯಮಗಳ ಜತೆ ಪೈಪೋಟಿ ನಡೆಸಬೇಕಾಗಿ ಬಂದಿರುವುದು ದುರದೃಷ್ಟವೇ ಸರಿ. ಆದ್ದರಿಂದಲೇ ಇಲಿ ಗಾತ್ರದ ಲೇಖನಕ್ಕೆ ಆನೆ ಗಾತ್ರದ ಚಿತ್ರಗಳು ಕಾಣಿಸು ತ್ತಿರುವುದು. ಪತ್ರಿಕೆಗಳು ಓದಿ ಮನನ ಮಾಡುವ ಮಾಧ್ಯಮಗಳಾಗಿರದೆ, ನೋಡಿ ಒಗೆಯುವ ಸಾಧನಗಳಾಗಿವೆ. ಸದ್ಯದ ವೇಗವರ್ಧಕ ಯುಗ ದಲ್ಲಿ ಮನಃಪಟಲದ ಮೇಲೆ ಛಾಯಾ ಚಿತ್ರಗಳು ಎಷ್ಟು ಧಾವಂತದಲ್ಲಿ ಹಾಯ್ದು ಹೋಗುತ್ತಿವೆ ಯೆಂದರೆ ಯಾವುದೂ ದೀರ್ಘ ಕಾಲದ ಪರಿಣಾ ಮಗಳನ್ನು ಬೀರುವುದಿಲ್ಲ. ಇದು ವಸ್ತುಸಂಗ್ರ ಹಾಲಯಗಳಲ್ಲಿ ಪ್ರದರ್ಶನಗಳನ್ನು ನೋಡಿದಂತೆ. ಒಂದರ ಮೇಲೊಂದನ್ನು ನೋಡುತ್ತಲೇ ಎಲ್ಲವನ್ನೂ ಕಳೆದುಕೊಳ್ಳುತ್ತೇವೆ.

ಇಂಥಹ ಪರಿಸ್ಥಿತಿಯಲ್ಲಿ ಸಾಹಿತ್ಯ ಸಂವಾದಕ್ಕೇ ಮೀಸಲಾದ ಚಿಕ್ಕ ಪತ್ರಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಇರಬೇಕು. ಆದರೆ ಇಲ್ಲ. ಚಿಕ್ಕ ಪತ್ರಿಕೆಗಳು ಸಾಕಷ್ಟು ಜನರನ್ನು ತಲುಪುತ್ತಿಲ್ಲ ಎನ್ನುವುದೊಂದು ಸಮಸ್ಯೆಯಾದರೆ ಅವಕ್ಕೆ ಕೂಡಾ ಮೌಲಿಕ ಲೇಖನಗಳ ಕೊರತೆಯಿದೆ ಎನ್ನುವುದು ಇದಕ್ಕಿಂತಲೂ ಗಂಭೀರವಾದ ಸಮಸ್ಯೆ. ಈಚೆಗೆ ಅಂಬೆಗಾಲಿಡುತ್ತಿರುವ ಅಂತ ರ್ಜಾಲ ಪತ್ರಿಕೆಗಳು ಈ ನಿಟ್ಟಿನಲ್ಲಿ ಎಷ್ಟು ಪರಿಣಾಮಕಾರಿಯೋ ಕಾದುನೋಡಬೇಕಾಗಿದೆ.

ವಿಮರ್ಶೆಯಾದರೂ ಯಾಕೆ ಬೇಕು ಎಂದು ಕೇಳುವವರಿದ್ದಾರೆ. ಇದಕ್ಕೆ ಸಾಕ್ರೆಟಿಸ್ ಎರಡು ಸಾವಿರ ವರ್ಷಗಳ ಹಿಂದೆಯೇ ಉತ್ತರ ನೀಡಿದ್ದಾನೆ. ಪರಿಶೀಲನೆಗೆ ಒಳಗಾಗದ ಜೀವನ ಜೀವಿಸಲು ಯೋಗ್ಯವಲ್ಲ ಎಂದು. ಆದರೆ ವಿಮರ್ಶೆ ಯಾಕೆ ಎನ್ನುವ ಮಂದಿ ವಿಜಕ್ಕೂ ವಿಮ ರ್ಶೆಯನ್ನು ನಿರಾಕರಿಸಿ ಈ ಮಾತನ್ನು ಹೇಳುತ್ತಿಲ್ಲ. ಐಡಿಯಲಾಗ್ ಜನರು (ಎಂದರೆ ಸಿದ್ಧಾಂತಿಗಳು) ಕೃತಿ ಎನ್ನುವುದನ್ನೊಂದು ಗೂಟವಾಗಿಸಿ ತಂತಮ್ಮ ಸಿದ್ಧಾಂತಗಳನ್ನು ತೂಗುಹಾಕುವ ಅತಿರೇಕಗಳಿಗೆ ಇಂಥಹ ಮಾತುಗಳು ಬರುತ್ತವೆ. ಉದಾಹ ರಣೆಗೆ, ಫ್ರಾಯ್ಡಿ ಯನರಿಗೆ ಮನುಷ್ಯನ ಪ್ರತಿ ಯೊಂದು ವರ್ತನೆಯೂ ಲೈಂಗಿಕ ದಮನದ ಸಂಕೇತವಾದರೆ, ಮಾರ್ಕ್ಸಿಸ್ಟರಿಗೆ ಪ್ರತಿಯೊಂದು ಸಂಗತಿಯೂ ಆರ್ಥಿಕ ಶೋಷಣೆಯ ಕುರುಹಾಗಿ ಕಾಣಿಸುತ್ತದೆ.ಅದೇ ರೀತಿ ಎಲ್ಲಾ ತರದ ವರ್ಗೀ ಕರಣವೂ ದಲಿತವಾದಿಗಳಿಗೆ ಜಾತಿ ಪದ್ಧತಿಯ ಕರಾಳತನವೆಂದು ತೋರಿದರೆ, ಸ್ತ್ರೀವಾದಿಗಳಿಗೆ ಲಿಂಗ ತಾರತಮ್ಯದ ಪರಣಾಮವೆಂದು ಅನಿಸು ತ್ತದೆ. ನಾನಿದನ್ನೆಲ್ಲ ಅತಿ ಸರಳೀಕರಿಸಿ ಇಲ್ಲಿ ಹೇಳು ತ್ತಿರುವುದರಿಂದ ಇದು ಅಸಹಜ ಎನಿಸಬಹು ದಾದರೂ, ನಿಷ್ಪಕ್ಷ ಪಾತವಾಗಿ ನೋಡಿದರೆ ಸಾಹಿತ್ಯ ವಿಮರ್ಶೆಯಲ್ಲಿ ಇಂಥಹ ವಿಪರ್ಯಾ ಸಗಳು ಆಗಾಗ ಕಾಣಿಸಿಕೊಂಡಿವೆ ಎನ್ನುವುದನ್ನು ಬಹುಶಃ ಯಾರೂ ಅಲ್ಲಗಳೆಯಲಾರರು. 1970 ರ ದಶಕದಷ್ಟು ಹಿಂದೆಯೇ ಸೂಸನ್ ಸೊಂಟಾಗ್ ತನ್ನ (ವಿಮರ್ಶೆಯ ವಿರುದ್ಧ) ಎಂಬ ಲೇಖನ ದಲ್ಲಿ ಇದರ ಕುರಿತಾಗಿ ಎಚ್ಚರಿಕೆ ನೀಡಿದ್ದಳು.

ಆದರೆ ವಿಮರ್ಶೆಯ ಕುರಿತಾದ ಅಸಹನೆ ಮೂಲತಃ ಸಾಹಿತ್ಯದ ಕುರಿತಾದ ಅಸಹನೆ ಮೂಲತಃ ಅಕ್ಷರ ಸಂಸ್ಕೃತಿಯ ಕುರಿತಾದ ಅಸಹನೆ. ಅಕ್ಷರ ಸಂಸ್ಕೃತಿ ಇಂದು ಪರಸ್ಪರ ವಿರುದ್ಧ ವಾದ ಇಬ್ಬಗೆಯ ಧಾಳಿಗಳನ್ನು ಎದುರಿಸಬೇಕಾಗಿದೆ. ಒಂದು, ಅಕ್ಷರ ಸಂಸ್ಕೃತಿ ಯಿಂದ ವಂಚಿತ ರಾದ ಜನರ ಪರವಾದ ವಾದ. ಅಕ್ಷರ ಸಂಸ್ಕೃತಿ ಶೋಷಣೆಗೆ ಕಾರಣ ವಾದ್ದರಿಂದ ಅಕ್ಷರವೇ ಗುಮಾನಿಯದು ಎಂಬ ತರ್ಕ. ಇನ್ನೊಂದು ವಾಲ್ಟರ್ ಜೆ.ಓಂಗ್ ಹೇಳುವ ಆಧುನಿಕ ಯುಗದ (ದ್ವಿತೀಯ ಮೌಖಿಕತೆ), ಎಂದರೆ ತಾಂತ್ರಿಕ ಯುಗದ ಅಕ್ಷರಸ್ಥರು ಸಹಾ ಮತ್ತೆ ಮೌಖಿಕತೆಯ ಕಡೆಗೆ ಮರಳುವುದು. ಇಂದು ನಾವು ವ್ಯಾಪಕವಾಗಿ ಬಳಸುತ್ತಿರುವ ಸೆಲ್ ಫೋನ್ ಇದಕ್ಕೊಂದು ಉದಾಹರಣೆ. (ಓಂಗ್ ಈ ಮಾತನ್ನು ಹೇಳಿದಾಗ ಸೆಲ್ ಫೋನ್ ಇನ್ನೂ ಬಳಕೆಗೆ ಬಂದಿರಲಿಲ್ಲ ಎನ್ನುವುದು ಆತನ ಕಾಲಜ್ಞಾನ ಗುಣವನ್ನು ಸೂಚಿಸುತ್ತದೆ! ಸಾಹಿತ್ಯ ವಾಗಲಿ ವಿಮರ್ಶೆಯಾಗಲಿ ಇಂತ ಕಠಿಣ ಪರಿಸ್ಥಿತಿಯನ್ನು ಎದುರಿಸಿಕೊಂಡೇ ಮುಂದುವ ರಿಯಬೇಕಾಗಿದೆ.

---

## ಕಾರಣ



ಕಾರಣ ಕಾಯುತ್ತಿದೆ.
ಅದಕ್ಕೆ ಎಲ್ಲಾದರೊಂದು
ಕಡೆ ನುಗ್ಗಿಕೊಳ್ಳಲೇಬೇಕು,
ನುಗ್ಗಿ ತನ್ನ ಸ್ಥಾನ ವನ್ನು
ಗಟ್ಟಿಗೊಳಿಸಿಕೊಳ್ಳಬೇಕು,
ಹಾಗಾಗಿ ನಮ್ಮ ಮಾತಿನ
ನಡುವೆ ಬದುಕಿನ ನಡುವೆ
ಸಂಬಂಧದ ನಡುವೆ,
ಪ್ರೀತಿ ದ್ವೇಷ ಅಸೂಯೆ
ಈ ಎಲ್ಲದರ ನಡುವೆ
ಆಗಾಗ ನುಗ್ಗಿ
ಹೊರಬರುತ್ತಿರುತ್ತದೆ.
ನಾವು ನಮಗೆ
ಅಗತ್ಯವಿದ್ದರೆ ಮಾತ್ರ
ಅದನ್ನು ಗಟ್ಟಿಯಾಗಿ ಹಿಡಿದು ನಮ್ಮ ಜೊತೆ ಬೆಳೆಯಬೇಕು, ಇಲ್ಲವಾದರೆ ಆದಷ್ಟು ದೂರಕ್ಕೆ ಸರಿಸಿ ಮುಂದುವರಿಯುವ ಪ್ರಯತ್ನ ಮಾಡಬೇಕು. ಹಾಗಾಗಿ ಕಾರಣ ದೂರದಲ್ಲೇ ಉಳಿದುಬಿಡುತ್ತದೆ. ಸಾಧ್ಯವಾದರೆ ನಮ್ಮ ಬದುಕಿಗೆ ಉಪಯೋಗವಾದರೆ ಜೊತೆಗೆ ಕೈ ಹಿಡಿದು ನಡೆಯುವ ಕೆಲಸವನ್ನು ಮಾಡಬಹುದು. ಹಾಗಾಗಿ ಕಾರಣ ನಮಗೆ ಬೇಕು ಬೇಡ್ವೊ ಬದುಕಿಗೆ ಅನ್ನುವ ತೀರ್ಮಾನವನ್ನು ನಾವು ಮಾಡಬೇಕು. ನಾಲ್ಕು ರಸ್ತೆ ಸೇರುವಲ್ಲಿ ಕಾರಣ ಕಾಯುತ್ತಿದೆ ಬೇಕಾದವರು ತಮ್ಮ ಜೊತೆ ನಡೆಸಿಕೊಂಡು ಹೋಗಬಹುದು ಜೊತೆಗಿರಿಸಿ ಕೊಂಡು ಹೋಗಬಹುದು ತೊರೆದಾದರೂ ಹೋಗಬಹುದು... ಕಾರಣ ಕಾಯುತ್ತಿದೆ ಅಷ್ಟೇ..

**- ಧೀರಜ್ ಬೆಳ್ಳಾರೆ**

## ಮೀನು



ನಿನ್ನದೇನಿದೆಯೋ...ದೋಣಿಯಲ್ಲಿ ಬಂದು ದೊಡ್ಡ ಬಲೆಯನ್ನು ಬೀಸಿ ನಮ್ಮನ್ನ ಹಿಡಿದು ಕೊಂಡು ಹೋಗಿ ಮಾರುಕಟ್ಟೆಯಲ್ಲಿ ಬೆಲೆ ಕಟ್ಟಿ ಮಾರ್ತೀರಾ ನನಗೆ ಒಂದು ದಿನವೂ ಆಹಾರ ಹಾಕಿದವರಲ್ಲ ಒಳ್ಳೆಯ ನೀರನ್ನ ಬದುಕೋಕೆ ಬಿಟ್ಟವರಲ್ಲ... ಸಣ್ಣವರು ದೊಡ್ಡವರಲ್ಲದೆ ಪ್ರತಿ ಯೊಬ್ಬರನ್ನು ನಿಮ್ಮ ಸ್ವಾರ್ಥಕ್ಕೆ ಬಳಸಿಕೊಂಡವರು... ನಮಗೂ ಬದುಕಿದೆ ಕುಟುಂಬವಿದೆ ಸ್ವಾತಂತ್ರವಿದೆ ಅನ್ನೋದನ್ನ ನೀವು ಯಾವತ್ತೂ ಗಮನಿಸಿ ಇಲ್ಲ. ನಿಮಗೆ ಒಂದು ದಿನವ ಅನಿಸಿಲ್ವಾ ನಮ್ಮ ಸಾವಿನಿಂದ ನೀವು ಬದುಕ್ತಾ ಇದ್ದೀರಿ ಅಂತ. ಒಂದು ಸಲ ಯೋಚನೆ ಮಾಡಿ ನೋಡಿ...ಹೀಗಂತ ಸಾಲಾಗಿ ಇಟ್ಟಿದ್ದ ಬೇರೆ ಬೇರೆ ಜಾತಿಯ ಮೀನುಗಳು ನನ್ನನ್ನು ನೋಡಿ ಹೇಳುವುದಕ್ಕೆ ಆರಂಭ ಮಾಡಿದವು... ಕೇಳಿಸಿಕೊಂಡೆ ಕೆಲವನ್ನು ಮನೆಯ ಪದಾರ್ಥಕ್ಕೆ ತೆಗೆದುಕೊಂಡೆ ಹೋದೆ.

---

# ಅರ್ಥಪೂರ್ಣವಾಗಿಕನ್ನಡಕಟ್ಟುವಕೆಲಸವಾಗಬೇಕಿದೆ

**ಅ**ಂತು ಇಂತು 2025ನೇ ನವೆಂಬರ ತಿಂಗಳಿಗೆ ನಾವೆಲ್ಲರೂ ಕಾಲಿಟ್ಟಿದ್ದೇವೆ. ಹಿಂದಿನ ವರ್ಷ ಗಳಲ್ಲಿ ಸಂಪದದಲ್ಲಿ ಕನ್ನಡ ನಾಡು, ಭಾಷೆ ಬಗ್ಗೆ ಬಂದ ಸರಣಿ ಲೇಖನಗಳಿಗೆ ಪೂರಕವಾಗಿ ನಾನು ಈ ವರ್ಷ ಮತ್ತೊಂದು ಲೇಖನ ಬರೆಯಲು ಮನಸ್ಸು ಮಾಡಿರುವೆ. ಇದಕ್ಕೆ ಮುಖ್ಯ ಕಾರಣ ನಿವೃತ್ತ ಮುಖ್ಯೋಪಾಧ್ಯಾಯಿನಿ, ಕವಯತ್ರಿ, ಲೇಖಕಿ ಶ್ರೀಮತಿ ರತ್ನಾ ಕೆ.ಭಟ್, ತಲಂಜೇರಿ ಇವರು. ನವೆಂಬರ್ ತಿಂಗಳಿಗೆ ಇನ್ನೇನು ಒಂದು ವಾರ ಇರುವಾಗ ಅನಿರೀಕ್ಷಿತವಾಗಿ ಅವರ ದೂರವಾಣಿ ಕರೆ ಬರುತ್ತದೆ. ಹೀಗೇ ಕುಶಲೋಪರಿ ಮಾತುಕತೆಯ ಬಳಿಕ ಕರ್ನಾಟಕ ರಾಜ್ಯೋತ್ಸ ವದ ಸಂದರ್ಭದಲ್ಲಿ ನಾವೇನು ಮಾಡಬಹುದು ಎನ್ನುವ ಮಾತು ನಮ್ಮ ನಡುವೆ ಬಂತು. ಅವರು ನೀಡಿದ ಸಲಹೆ, ಮಾಹಿತಿ ಜೊತೆಗೆ ನನ್ನ ಕೆಲವೊಂದು ಅನಿಸಿಕೆಗಳನ್ನು ಸೇರಿಸಿ ಒಂದು ಪುಟ್ಟ ಬರಹ ಬರೆದಿರುವೆ.

ಹಿಂದಿನ ವರ್ಷಗಳಲ್ಲಿ ನಾವೇನು ಮಾಡಿದ್ದೇವೆ ಎಂದು ನಮಗೆ ನಾವೇ ಪ್ರಶ್ನಿಸಿದರೆ, ಏನೂ ಇಲ್ಲ ಎಂಬ ಉತ್ತರ ದೊರೆಯಬಹುದು. ಮನೆಯಲ್ಲಿರುವ ನಮ್ಮ ಮುದ್ದು ಮಕ್ಕಳಿಗೆ ಒಂದಷ್ಟು ಕನ್ನಡ ಭಾಷೆಯ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬಹುದಲ್ಲವೇ? ಕಥೆ, ಕವನ, ನುಡಿಗಟ್ಟುಗಳ ಪರಿಚಯ, ಅಕ್ಷರಭ್ಯಾಸ, ಅದರಲ್ಲಿನ ವಿಧಗಳು, ನಗೆಹನಿಗಳು, ನಿಯತಕಾಲಿಕೆಗಳನ್ನು ಓದಲು ಪ್ರೋತ್ಸಾ ಹ ಕೊಡುವುದು, ಮುಖ್ಯವಾಗಿ, ನಾಡು ನುಡಿಯಲ್ಲಿ ಭಾಷಾ ಸಂವಹನ ನಡೆಸುವುದು ಇತ್ಯಾದಿಗಳನ್ನು ಮಾಡಿಸಬಹುದು. ಮಾತೃಭಾಷೆ ಕಲಿಯೋಣ, ವ್ಯವಹಾರಿಕ ವಾಗಿ ಬೇರೆ ಭಾಷೆಗಳು ನಮಗೆ ಬೇಕೇ ಬೇಕು. ಅನ್ಯ ಭಾಷೆಯನ್ನು ಮೇಲಿಟ್ಟು, ತಾಯಿ ಭಾಷೆಯನ್ನು ತುಳಿಯದಿರೋಣ, ಕಡೆಗಣಿಸದಿರೋಣ.

ಮುಂದಿನ ದಿನಗಳಲ್ಲಿ ನಮ್ಮ ನಾಡು ನುಡಿ ಭಾಷೆಗಾಗಿ, ನಾಡಿನ ಮಕ್ಕಳಾದ ನಮ್ಮ ಕರ್ತವ್ಯವೇನು? ಎಂದು ಚಿಂತನ-ಮಂಥನ ಮಾಡಬೇಕಾದ್ದು ನಮ್ಮ ಆದ್ಯ ಕರ್ತವ್ಯ. ನಾವೇ ಮರೆತರೆ ಅನ್ಯರಿನ್ನೇನ ಮಾಡುವರು?

1.ಕನ್ನಡ ಮಾಧ್ಯಮ ಶಾಲೆಗಳನ್ನು ಆದಷ್ಟೂ ಉಳಿಸಿಕೊಳ್ಳಲು ಯೋಜನೆಗಳನ್ನು, ಯೋಚನೆಗಳನ್ನು ಹಾಕಿಕೊಂಡು, ರೂಪುರೇಶೆಗಳನ್ನು ಈಗಲೇ ಸಿದ್ಧಪಡಿಸಿ ಕೊಳ್ಳುವುದು, ಇದರಲ್ಲಿ ಸ್ಥಳೀಯ ಸಂಘ-ಸಂಸ್ಥೆಗಳ ಸಹಕಾರ ತೆಗೆದುಕೊಳ್ಳುವುದು.

2.ಆಂಗ್ಲ ಭಾಷೆ (ಮಾಧ್ಯಮ) ಶಾಲೆಗಳಿಗೆ ಹೋದರೆ ಮಾತ್ರ ನಮ್ಮ ಮಕ್ಕಳು ಉದ್ಧಾರ ಆಗು ವರೆಂಬ ಭ್ರಮೆಯಿಂದ ಹೊರಬರುವಂತೆ ಹೆತ್ತವರ ಮನವೊಲಿಸುವುದು. ಕನ್ನಡ ಭಾಷೆ ಯೊಂದಿಗೆ ಆಂಗ್ಲ ಭಾಷೆಯನ್ನೂ ಕಲಿಯಬೇಕು ಎಂಬ ಧೋರಣೆಯ ಬಗ್ಗೆ ಅರಿವು ಮೂಡಿಸುವ ಕೆಲಸ, ಅಲ್ಲಲ್ಲಿ ಆಗಬೇಕು.

3.ಕನ್ನಡ ನೆಲ-ಜಲದ ಬಗ್ಗೆ, ನಮ್ಮದೆಂಬ ಪ್ರೀತಿ, ಗೌರವ, ಮಮಕಾರ ಮನದಲ್ಲಿ ಮೂಡು ವಂತೆ ಜಾಗೃತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು,ಅವಕಾಶ, ಅನುದಾನ ನೀಡುವುದು, ಸಂವಿ ಧಾನದಲ್ಲೇ ಅದಕ್ಕೆ ಬೇಕಾದ ಪೂರಕ ಮಾಹಿತಿಗಳನ್ನು ಅಳವಡಿಸುವುದು, ಸಂಘ-ಸಂಸ್ಥೆಗಳ ಮೂಲಕ ಅನುಷ್ಠಾನ ಗೊಳಿಸುವಲ್ಲಿ, ಸರಕಾರವೇ ಸಹಾಯ ನೀಡುವುದು, ಜನಜಾಗೃತಿ ಗೊಳಿಸುವುದು, ಸಂಬಂಧಿಸಿದವರ ಗಮನಕ್ಕೆ ತರುವ ಕೆಲಸಗಳನ್ನು ಹಮ್ಮಿಕೊಳ್ಳುವುದು ಮುಂತಾದವುಗಳನ್ನು ಮಾಡಬಹುದು.



4.ಕನ್ನಡದಲ್ಲಿ, ಕನ್ನಡಕ್ಕಾಗಿ ದುಡಿಯುತ್ತಿರುವ ಮಹನೀಯರನ್ನು, ಸಾಹಿತಿಗಳನ್ನು ಗುರುತಿ ಸುವ, ಅವರ ಕೆಲಸ, ಬರವಣಿಗೆಗೆ ತಕ್ಕ ಅಭಿನಂದನೆ, ಸನ್ಮಾನಗಳನ್ನು ಆಯೋಜಿಸುವಲ್ಲಿ ಟೊಂಕಕಟ್ಟಿ ನಿಂತು ಕೆಲಸಕಾರ್ಯಗಳನ್ನು ಮಾಡಿದ ಅರ್ಹ ಫಲಾನುಭವಿಗಳ ಆಯ್ಕೆ ಆಗ ಬೇಕು. ಸಮರ್ಪಕವಾಗಿ ಮತ್ತು ಸಮರ್ಥವಾಗಿ ಚಿಂತನೆಗಳು, ಚರ್ಚೆಗಳು ನಡೆದು, ಯೋಗ್ಯತೆ ಇರುವವರನ್ನು ಆಯ್ಕೆ ಮಾಡುವಂತಾಗಬೇಕು. ಅವರ ಸಾಹಿತ್ಯ ಪ್ರಕಾರಗಳನ್ನು ಮುದ್ರಣ ಮಾಡುವಲ್ಲಿ ಆಸಕ್ತಿ ತೋರಿ, ಅನುಷ್ಠಾನಗೊಳಿಸಬೇಕು. ಆಯಾಯ ಪ್ರದೇಶಕ್ಕೆ ಒಂದಷ್ಟು ಉತ್ಸಾಹಿಗಳನ್ನು ನೇಮಕ ಮಾಡಿ, ಎಲೆಯ ಮರೆಯ ಕಾಯಿಯಂತಿರುವವರನ್ನೂ ಸಹ ಗುರುತಿಸುವ ಕೆಲಸವಾಗಬೇಕಿದೆ. ಕವಿಗೋಷ್ಠಿ, ವಿಚಾರ ಗೋಷ್ಠಿ ಹಾಗೂ ಶಾಲಾ ಕಾಲೇ ಜುಗಳ ಮಕ್ಕಳಲ್ಲಿ ಸಹ ಸಾಹಿತ್ಯ ಪ್ರಕಾರಗಳನ್ನು ಗುರುತಿಸುವ, ಕಲಿಸುವ, ಪ್ರೋತ್ಸಾಹಿಸುವ ಬಗ್ಗೆ ಶಿಬಿರಗಳ ಆಯೋಜನೆ, ತರಬೇತಿ ನೀಡುವುದು, ಮಕ್ಕಳ ಸಾಹಿತ್ಯದಲ್ಲಿ ಸಹ ಉತ್ತಮರಿಗೆ ಅಭಿನಂದನೆ ನೀಡುವ ಕೆಲಸವಾಗಬೇಕಿದೆ. ಕನ್ನಡದ ಬಗ್ಗೆ ಸಣ್ಣ ಸಣ್ಣ ಕೃತಿಗಳನ್ನು ಮುದ್ರಿಸಿ ಪ್ರಾಥಮಿಕ ಶಾಲೆಯಲ್ಲಿ ಹಂಚಬೇಕು.

5.ಬೀದಿ ನಾಟಕಗಳು, ರೂಪಕಗಳು, ಪ್ರಹಸನಗಳು, ಆಕಾಶವಾಣಿ, ದೂರದರ್ಶನದಲ್ಲೂ ಪ್ರಸಾರ ಮತ್ತು ಪ್ರಚಾರಗಳು ಇವುಗಳಿಗೆ ಆರ್ಥಿಕ ಸಹಾಯವನ್ನು ಬಜೆಟ್ಟಲ್ಲಿಯೇ ಕಾದಿರಿ ಸುವಂತಾಗಬೇಕು. ವಿಧಾನಸಭಾ ಕ್ಷೇತ್ರದಲ್ಲಿ ಆಯಾಯ ಪ್ರದೇಶ, ಪ್ರಾದೇಶಿಕ ಭಾಷೆಯ ವ್ಯತ್ಯಾಸಗಳಿಗನುಗುಣವಾಗಿ ಪ್ರತಿನಿಧಿಗಳ ನೇಮಕವಾಗಬೇಕು. ಅವರು ವಿಧಾನ ಸಭಾ ಸದಸ್ಯರಿಗೆ ಆಗಾಗ ಮಾಹಿತಿ ನೀಡುವಂತಾಗಬೇಕು.

6.ಮುಖ್ಯವಾಗಿ ದಾಖಲೀಕರಣವಾಗಬೇಕಾದ್ದು ಅತ್ಯಂತ ಅವಶ್ಯಕವಾಗಿದೆ. ಹಿಂದಿನ- ಇಂದಿನ ತಲೆಮಾರಿನ ಸಾಹಿತ್ಯ ಪ್ರಕಾರಗಳಲ್ಲಿ ರಚನೆಯಾದ ಎಲ್ಲಾ ಸಾಹಿತ್ಯಗಳನ್ನು ಒಗ್ಗೂಡಿಸಿ, ದಾಖಲಿಸುವ ಕೆಲಸವಾದರೆ, ಮುಂದಿನ ತಲೆಮಾರಿಗೆ ಪ್ರಯೋಜನವಾಗಬಹುದು ಹಾಗೆ ಸಾಹಿತಿಗಳ ದಾಖಲೀಕರಣ ಸಹ ಅಷ್ಟೇ ಮುಖ್ಯ. ಕಾಟಾಚಾರಕ್ಕೆ ರಾಜ್ಯೋತ್ಸ ವ ಆಚರಣೆ ಯಾಗುತ್ತಿದೆ, ನಿಜವಾದ ರಾಜ್ಯೋತ್ಸ ವದ ಆಚರಣೆ, ಅದರ ಹಿಂದಿನ ಉದ್ದೇಶ, ಯಾಕೆ, ಏನು? ಎಲ್ಲವೂ ವಿದ್ಯಾರ್ಥಿ ಜೀವನದಲ್ಲಿಯೇ ಅರಿವು ಮೂಡಿಸುವ ಕೆಲಸ ವಾಗಬೇಕಿದೆ.

7.ಕನ್ನಡ ನೆಲವೊಂದೇ, ಜಲವೊಂದೇ ಇದರ ಅನುಷ್ಠಾನದೊಂದಿಗೆ, ಪ್ರದೇಶದಿಂದ ಪ್ರದೇಶಕ್ಕೆ ಭಾಷೆಯಲ್ಲಿ, ನುಡಿಯಲ್ಲಿ, ಆಡುವಲ್ಲಿ ತುಂಬಾ ವ್ಯತ್ಯಾಸವಿದೆ. ನಗೆಪಾಟಲಿಗೆ ಈಡಾಗುವಂಥ ಸಂದರ್ಭ ಎದುರಾಗದಂತೆ ಭಿನ್ನತೆಯಲ್ಲಿ ಏಕತೆಯನ್ನು, ಭಾಷಾ ಹಿಡಿತವನ್ನು, ಅರ್ಥೈಸಿಕೊಳ್ಳಲು ಸಹಕಾರ ಆಗುವಂತಹ ಕೆಲಸವಾಗಬೇಕಿದೆ. ಆದಷ್ಟೂ ಕನ್ನಡ ನಾಡಿನ ಜನರಿಗೆ ಉದ್ಯೋಗವನ್ನು, ಕನ್ನಡ ನಾಡಿನಲ್ಲಿಯೇ ನೀಡಿದರೆ, ಇನ್ನೂ ಉತ್ತಮ ರೀತಿಯಲ್ಲಿ ಸರ್ಕಾರದ ಆಸೆ ಆಕಾಂಕ್ಷೆಗಳು ಅನುಷ್ಠಾನಗೊಳ್ಳಲು ಸಹಕಾರಿ ಆದೀತು.

8.ಸರ್ಕಾರಿ ಸಂಸ್ಥೆಯ ಉದ್ಯೋಗಿಗಳ ಮಕ್ಕಳಾದರೂ ಕನ್ನಡ ಮಾಧ್ಯಮದಲ್ಲಿ ಓದಿದರೆ, ಅವರಿಗೆ ರಿಯಾಯಿತಿಗಳನ್ನು ಕೆಲವು ವಿಷಯದಲ್ಲಿ ನೀಡಿದರೆ ಪ್ರಯೋಜನವಾಗಲೂ ಬಹುದು. ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಮೀಸಲಾತಿ ಘೋಷಣೆಯಾದರೆ ಅನುಕೂಲ ವಾದೀತು.

ಒಟ್ಟಾರೆಯಾಗಿ ಕನ್ನಡ ನೆಲ-ಜಲ, ಕನ್ನಡ ನಮ್ಮ ಹೊತ್ತ ಅಮ್ಮ ಎಂಬ ಅರಿವು, ಕನ್ನಡದ ಕೈಂಕರ್ಯದಲ್ಲಿ ಕನ್ನಡಿಗರಾದ ನಾವೆಲ್ಲರೂ ಒಗ್ಗೂಡಿ ದುಡಿಯುವಲ್ಲಿ ತೊಡಗಿಸಿಕೊಂಡರೆ, ನಮ್ಮಿಂದಾದ ಅಳಿಲಸೇವೆ ತಾಯಿಗೆ ಸಲ್ಲಿಸಿದಂತಾದೀತು ಎಂಬ ಸದಾಶಯದೊಂದಿಗೆ ಒಂದು ಸಣ್ಣ ಪ್ರಯತ್ನ.

ಸಿರಿಗನ್ನಡಂ ಗೆಲ್ಗೆ


**-ಶ್ರೀಮತಿ ರತ್ನಾ ಕೆ.ಭಟ್, ತಲಂಜೇರಿ**

---

# ಕೋಟಿಲಿಂಗೇಶ್ವರ ದೇವಸ್ಥಾನದ ಮಹಿಮೆ

**ಬ**ಂಗಾರಪೇಟೆಯಲ್ಲಿ ಕೋಟಿ ಲಿಂಗೇಶ್ವರ ದೇವಸ್ಥಾನ ಪ್ರಸಿದ್ಧ ವಾಗಿದೆ. ಈ ದೇವಸ್ಥಾನವು ಕಾಮ ಸಮುದ್ರ ಗ್ರಾಮದ ಹತ್ತಿರ ಇದೆ. ಕೋಟಿಲಿಂಗೇಶ್ವರ ದೇವಾಲಯ ಇರುವ ಶಿವಲಿಂಗವು ಇಡೀ ವಿಶ್ವದ ಲ್ಲಿಯೇ ದೊಡ್ಡದು. ಶಿವರಾತ್ರಿ ದಿನ ದಂದು ಕಡಿಮೆ ಎಂದರೆ 2ಲಕ್ಷ ಭಕ್ತಾಧಿಗಳು ಅಲ್ಲಿಗೆ ಪ್ರತಿವರ್ಷ ಆಗಮಿಸುತ್ತಾರೆ. ಕೋಟಿಲಿಂಗೇಶ್ವರ ದೇವಸ್ಥಾನವು ಬಂಗಾರದ ಗಣಿ ಯಿಂದ 6 ಕಿ.ಮೀ ದೂರ ಇದೆ. ಪ್ರತಿ ದಿನ ಪೂಜೆ, ಪುರಸ್ಕಾರವು ಮುಂಜಾನೆ 6 ಗಂಟೆ, ಸಂಜೆ 6 ಗಂಟೆಗೆ ನಡೆ ಯುತ್ತವೆ. ಪ್ರತಿ ದಿನ ಈ ಕಾರ್ಯ ಕ್ರಮ ನಡೆಸಿಕೊಡುವ ಪೂಜಾರಿಗಳಿದ್ದಾರೆ. ಪೂಜಾ ಸಮಯ ದಲ್ಲಿ ಡೋಲು, ಡಮರುಗ ಭಾರಿಸುವ ಸಂಪ್ರದಾಯ ಇದೆ. ಮಂತ್ರೋಚ್ಛಾರವೂ ಇದೆ. ತೀರ್ಥವನ್ನು ಶಿವಲಿಂಗದ ಮೇಲೆ ಪ್ರೋಕ್ಷಿಸಲಾ ಗುತ್ತದೆ. ಭಕ್ತಾಧಿಗಳು ಶಿವಲಿಂಗಕ್ಕೆ ತಮ್ಮ ಪೂಜೆಗಳನ್ನು ಸಲ್ಲಿಸುವರು.

ಇಲ್ಲಿ ತಂಗಲು ಅವಕಾಶ ಇದೆ. ಅತಿಥಿ ಗೃಹಕ್ಕೆ ಮೊದಲೇ ತಿಳಿಸಬೇಕು. ಇಲ್ಲಿ ಉಚಿತವಾಗಿ ಅನ್ನದಾನವನ್ನು ಮಾಡಲಾಗುತ್ತದೆ. ಕಣ್ಣು ಹಾಯಿಸಿದಷ್ಟೂ ಶಿವಲಿಂಗಗಳೇ ಕಾಣಸಿಗುವ ಕೋಟಿ ಲಿಂಗೇಶ್ವರ ಕೆ.ಜಿ.ಎಫ್. ಸಮೀಪದ ಕಮ್ಮಸಂದ್ರ ಗ್ರಾಮದ ಲ್ಲಿದೆ. ವಿವಿಧ ಬಗೆಯ ಅಸಂಖ್ಯ ಲಿಂಗಗಳಿರುವ ಕೋಟಿಲಿಂಗ ಕ್ಷೇತ್ರ ದಲ್ಲಿ ಮಂಜುನಾಥ, ಕನ್ಯಕಾಪರಮೇಶ್ವರಿ, ವಿನಾಯಕ, ಶ್ರೀನಿವಾಸ ಮೊದಲಾದ ಹಲವಾರು ದೇಗುಲ ಗಳಿವೆ. ವಿಶಾಲವಾಗಿ ಹರಡಿರುವ ಕೋಟಿಲಿಂಗ ಕ್ಷೇತ್ರದಲ್ಲಿ 108 ಅಡಿ ಶಿವಲಿಂಗ, ಧಾರ್ಮಿಕ ಚಿತ್ರಪಟ ಪ್ರದರ್ಶನ, ಪುಟ್ಟ ಕೊಳ ಆಕರ್ಷಕವಾಗಿದೆ.



ಕೋಟಿ ಶಿವಲಿಂಗ.. ಇಷ್ಟೆಂದರೆ ಸಾಕು, ಜನರಿಗೆ ತಟ್ಟನೆ ನೆನಪಾ ಗುವುದು ವಿಶ್ವಪ್ರಸಿದ್ಧಿಯಾಗಿರುವ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕಮ್ಮಸಂದ್ರದ ಶ್ರೀಕೋಟಿ ಶಿವಲಿಂಗಗಳ ದೇವಾಲಯ. ಈ ಪುಣ್ಯ ಕ್ಷೇತ್ರದ ಮಹಿಮೆ ಅಪ್ರತಿ ಮವಾದದು. ಅಲೌಕಿಕರಿಗಾಗಲಿ ಮತ್ತು ಲೌಕಿಕರಿಗಾಗಲಿ ಖುಷಿಯಿಂದ ಬಂದು ಕೋಟಿ ಲಿಂಗಗಳ ದರ್ಶನ ಭಾಗ್ಯ ದೃಶ್ಯವನ್ನು ಕಣ್ಣಾರೆ ನೋಡಬಹುದು.

ಇದಲ್ಲದೆ 20 ಅಡಿಗಳ ದೊಡ್ಡ ನಂದೀಶ್ವರನನ್ನು ಸಹ ನೋಡುವುದರ ಜೊತೆಗೆ ಶ್ರೀ ಮಂಜುನಾಥಸ್ವಾಮಿ, ಬ್ರಹ್ಮ, ವಿಷ್ಣು, ಮಹೇಶ್ವರ, ನವಗ್ರಹ ಗಳು, ಶ್ರೀವೆಂಕ ಟೇಶ್ವರಸ್ವಾಮಿ, ಮಾತಾ ಅನ್ನಪೂರ್ಣೇಶ್ವರಿ, ಸಂತೋಷ ಮಾತಾದೇವಿ ಪಾಂಡು ರಂಗಸ್ವಾಮಿ, ಪಂಚಮುಖ ಗಣೇಶ, ರಾಮ, ಲಕ್ಷ್ಮಣ, ಸೀತಾದೇವಿ, ಪ್ರಸನ್ನ ಆಂಜನೇಯಸ್ವಾಮಿ, ಪಂಚಮುಖಿ ಆಂಜನೇಯಸ್ವಾಮಿ, ಶ್ರೀ ಕನ್ನಿಕಾಪರ ಮೇಶ್ವರಿ, ಕರಿಮಾರಿಯಮ್ಮದೇವಿ ದೇವಾಲಯಗಳು ಪ್ರತ್ಯೇಕವಾಗಿ ನಿರ್ಮಾಣ ಮಾಡಿರುವು ದರಿಂದ ಭೂ ಕೈಲಾಸವೇ ಇದ್ದಂತೆ ಭಾಸವಾಗುತ್ತದೆ.

ತ್ರೇತಾಯುಗದಲ್ಲಿ ಶ್ರೀರಾಮ ತನ್ನ ರಾಜ್ಯದ ಜನತೆಯ ಸುಖಕ್ಕಾಗಿ ಅಶ್ವಮೇಧ ಯಾಗವನ್ನು ಮಾಡಿ ಕುದುರೆಯನ್ನು ಭಕ್ತರ ದರ್ಶನಕ್ಕೆ ಬಿಟ್ಟನಂತೆ. ಅದು ಕೋಲಾರ ಜಿಲ್ಲೆಯ ಈಗಿನ ಪ್ರಸಿದ್ಧ ಕಮ್ಮಸಂದ್ರಕ್ಕೆ ಬಂದು ಇಲ್ಲಿರುವ ಈಗಿನ ಕಲ್ಯಾಣಿಯಲ್ಲಿ ನೀರು ಕುಡಿದು ಮುಳಬಾಗಿಲು ತಾಲ್ಲೂಕಿನ ಆವಣಿಗೆ ಹೋದಾಗ ಅಲ್ಲಿ ಲವ-ಕುಶ ಈ ಅಶ್ವಮೇಧ ಯಾಗದ ಕುದುರೆಯನ್ನು ಕಟ್ಟಿದರಂತೆ. ಆ ಕುದುರೆಯು ತನ್ನ ಆಹಾರಕ್ಕಾಗಿ ದೊಡ್ಡ ಕಲ್ಲು ಬಂಡೆಯನ್ನು ತಿಂದು ಜೀರ್ಣಿಸಿಕೊಂಡ ಪ್ರತೀತಿ ಇದ್ದು, ಇಂದಿಗೂ ಸಹ ಕುದುರೆ ತಿಂದು ಬಿಟ್ಟಿರುವ ಕಲ್ಲನ್ನು ನೋಡಬಹುದಾಗಿದೆ. ಹೀಗೆ ತ್ರೇತಾಯುಗದ ಶ್ರೀರಾಮನ ಕುದುರೆ ಹಾಗೂ ದೇವತೆಗಳ ಪಾದಸ್ಪರ್ಶದಿಂದ ಪುಳಕಿತವಾದ ಸ್ಥಳವೇ ಈಗಿನ ಕೋಟಿಲಿಂಗೇಶ್ವರ ದೇವಾಲಯದ ಕಮ್ಮಸಂದ್ರವಾಗಿದೆ.

ಈ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಕೋಟಿ ಶಿವಲಿಂಗಗಳ ಪ್ರತಿಷ್ಠಾಪನೆಗೆ ಇಲ್ಲಿನ ವಾಲ್ಮೀಕಿ ಆಶ್ರಮದ ಮತ್ತು ಬಲಿಜ ಜನಾಂಗದ ಪೀಠಾಧಿಪತಿಗಳಾಗಿರುವ ಶ್ರೀ ಸಾಂಭವ ಶಿವಮೂರ್ತಿ ಸ್ವಾಮೀಜಿ ಶ್ರಮಿಸಿದ್ದಾರೆ. ಕಮ್ಮಸಂದ್ರದಲ್ಲಿ ವಿಶ್ವವಿಖ್ಯಾತಿ ಯನ್ನು ಹೊಂದಿರುವ 108 ಅಡಿಗಳ ಶಿವಲಿಂಗವನ್ನು ಪ್ರತಿಷ್ಠಾಪಿಸಿ, ಭಕ್ತರಿಗೆ ಆಹ್ಲಾದಕರ ವಾತಾವರಣ ಮೂಡಿಸಿ ಭಕ್ತರ ಮನಸ್ಸಿಗೆ ಮನಃಶಾಂತಿ ತರುವ ಕೋಟಿ ಶಿವ ಲಿಂಗಗಳ ದರ್ಶನದ ಯೋಜನೆ ರೂಪಿಸಿದ್ದಾರೆ. ಇದಲ್ಲದೇ ಕೋಟಿ ಲಿಂಗೇಶ್ವರ ದೇವಾಲಯದ ಟ್ರಸ್ಟ್‌ನಿಂದ ಪ್ರತಿ ವರ್ಷವು ಅನೇಕ ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿದ್ದು, ಪ್ರತಿ ತಿಂಗಳಿಗೊಮ್ಮೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ವಿವಿಧ ಕಾಲೇಜು ವಿದ್ಯಾರ್ಥಿಗಳಿಂದ ಶ್ರಮದಾನ ಮತ್ತು ಎನ್‌ಎಸ್‌ಎಸ್ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಬೆಂಗಳೂರಿನಿಂದ 98 ಕಿ.ಮೀ. ಕೋಲಾರದಿಂದ 25 ಕಿ.ಮೀ. ದೂರದಲ್ಲಿರುವ ಕೋಟಿಲಿಂಗ ಪ್ರೇಕ್ಷಣೀಯ ಕ್ಷೇತ್ರ ಇದಾಗಿದೆ. ಸಹಸ್ರಾರು ಲಿಂಗಗಳ ಶಿವಾಲಯ, ಭಕ್ತಿ ಒಂದೇ ಶಿವನ ಪಾದಕ್ಕೆ ಎಂಬಂತೆ ದೇವಲೋಕವೇ ಸೃಷ್ಟಿ ಆದಂತೆ ಕಾಣುವ ಈ ಕೋಟಿ ಲಿಂಗೇಶ್ವರ ಭಕ್ತಿ, ಯುಕ್ತಿ, ಶಕ್ತಿಯ ಕೇಂದ್ರವಾಗಿದೆ.. ಬನ್ನಿ ಒಮ್ಮೆ ಕೋಟಿ ಲಿಂಗೇಶ್ವರನನ್ನು ನೋಡಲಿಕ್ಕೆ..

---

# ಮೈಸೂರಿನ ಕುಕ್ಕರಹಳ್ಳಿ ಕೆರೆ




ಕೌಂಡಿವ್. ಮೈಸೂರಿನ ಕುಕ್ಕರ ಹಳ್ಳಿ ಕೆರೆ ಮೈಸೂರಿಗೇ ಏನು, ಕುವೆಂಪು ಅವರ ಮೂಲಕ ವಿಶ್ವ ವಿಖ್ಯಾತಿ ಪಡೆದಿರುವ ಜಾಗ. ಇಂದಿನ ಮೈಸೂರು ವಿವಿ ಆವ ರಣದ 150 ಎಕರೆ ಜಾಗದಲ್ಲಿ ಹರಡಿರುವ ಈ ಕೆರೆ ಮೈಸೂರಿಗೆ ಪರಿಸರ ಮುಕುಟದಂತಿರುವ ಅದ್ಭುತ ತಾಣ. ಈ ಕೆರೆಗೂ ಕುವೆಂಪು ಅವರಿಗೂ ಇದ್ದದ್ದು ತಾಯಿ-ಮಗನ ಅದ್ಭುತ ಸಂಬಂಧ.

ಕುವೆಂಪು ಅವರು 1958ರಲ್ಲಿ ಮೈಸೂರು ವಿವಿಯ ಕುಲಪತಿ ಯಾಗಿದ್ದಾಗ ದೂರದೃಷ್ಟಿ ಯಿಂದ ಮೈಸೂರು ವಿವಿಗೆ ಮಹಾರಾಜರ ಅಧೀನದಲ್ಲಿದ್ದ ಇಂದಿನ 739 ಎಕರೆಯ ಜಾಗದಲ್ಲಿ ಮಾನಸ ಗಂಗೋತ್ರಿ ನಿರ್ಮಿಸಿದರು. 150 ಎಕರೆ ಜಾಗದಲ್ಲಿದ್ದ ಕುಕ್ಕರಹಳ್ಳಿ ಕೆರೆಯನ್ನು ವಿವಿ ಅಧೀನಕ್ಕೆ ತೆಗೆದುಕೊಂಡರು. ಹಾಗಾಗಿ, ಕುವೆಂಪು ಅವರಿಗೆ ಕುಕ್ಕರಹಳ್ಳಿ ಕೆರೆ ಜೊತೆ ಅವಿನಾಭಾವ ಸಂಬಂಧ. ನಿತ್ಯ ಬೆಳಿಗ್ಗೆ-ಸಂಜೆ ಇಲ್ಲಿ ವಾಯು ಸಂಚಾರಕ್ಕೆ ಬಂದು ಕೆರೆಯ ಅದ್ಭುತ ವರ್ಣಗ ಳಿಂದ ಸೂರ್ಯನ ಬೆಳಕಿಗೆ ಪ್ರತಿಫಲನಗೊಳ್ಳುವ ನೀರನ್ನು ನೋಡುತ್ತಾ ಕವಿತೆಗಳನ್ನು ಬರೆಯಲು ಸ್ಫೂರ್ತಿ ಪಡೆಯುತ್ತಿದ್ದರು.

ಇಂದಿನ ಪ್ರವಾಸದಲ್ಲಿ ಮೈಸೂರಿನ ಮತ್ತೊಂದಿಷ್ಟು ಪ್ರವಾಸಿ ತಾಣದ ಬಗ್ಗೆ ತಿಳಿಯೋಣವೇ... ಮತ್ತೇಕೆ ತಡ - ಬನ್ನಿ.... ನಮ್ಮ ನಾಡಿನ ಸಾಂಸ್ಕೃತಿಕ ಕೇಂದ್ರವಾಗಿರುವ ಮೈಸೂರು ಜಿಲ್ಲೆಯ ಹಲವು ಪ್ರವಾಸ ತಾಣಗಳಲ್ಲಿ ಪ್ರಮುಖವಾದ ಕುಕ್ಕರಹಳ್ಳಿ ಕೆರೆ ಗೆ ಪಯಣ ಮಾಡೋಣ.


ಆನಂದಮಯ ಈ ಕುಕ್ಕರಳ್ಳಿ ಕೆರೆ ಹೃದಯವು. ಕುವೆಂಪು ಮನದಲ್ಲಿ ಕವನಗಳ ಅಲೆ ಯೆಬ್ಬಿಸಿದ ಕೆರೆ. ಅಷ್ಟೇ ಏಕೆ, ಪುಸ್ತಕ ಪ್ರೇಮಿಗಳು ಸುಳಿದಾಡುವ ತಾಣವೂ, ಮೈಸೂರಿಗೆ ಬರುವ ಪ್ರವಾಸಿಗರು ನೋಡಲೇ ಬೇಕೆಂಬ ಮಹದಾಸೆ ತರುವ ಕೆರೆಯಿದು. ರಾಷ್ಟಕವಿ ಕುವೆಂಪು ಅವರಿಗೆ ಮೈಸೂರಲ್ಲಿ ಅಚ್ಚುಮೆಚ್ಚಿನ ತಾಣಗಳೆಂದರೆ ಕುಕ್ಕರಹಳ್ಳಿ ಕೆರೆ ಹಾಗೂ ಮೈಸೂರು ವಿವಿಯ ಮಾನಸ ಗಂಗೋತ್ರಿ ಆವರಣ.

ಕವಿ ಮನಸ್ಸಿ ನ ಕುವೆಂಪು ಇಲ್ಲಿನ ಪರಿಸರವನ್ನೂ, ತಣ್ಣನೆಯ ಗಾಳಿಯನ್ನೂ ಸವಿಯುತ್ತ ಭಾವಪರವಶರಾಗಿ ರಚಿಸಿದ ನೂರಾರು ಕವಿತೆಗಳು ಇಂದು ಜನ ಮಾನಸದಲ್ಲಿ ಸೇರಿವೆ. ಕುಕ್ಕರ ಹಳ್ಳಿ ಕೆರೆ ಕುವೆಂಪು ಸಾಹಿತ್ಯದಲ್ಲಿ ಕುಕ್ಕನಹಳ್ಳಿ ಕೆರೆಯಾಗಿಯೂ ಕರೆಸಿ ಕುವೆಂಪು ಅವರ ಪ್ರಸಿದ್ಧ ಕುಕ್ಕರಹಳ್ಳಿಯ ಕೆರೆಯ ಮೇಲೆ ಕವಿತೆ, ದೇವರು ರುಜು ಮಾಡಿ ದನು, ಕವಿ ಪರವಶನಾಗುತ್ತಾ ಅದ ನೋಡಿದನು ಎಂಬ ಸಾಲುಗಳು ಈ ಕೆರೆಯ ಸೌಂದರ್ಯ ಬಿಚ್ಚಿಡುತ್ತವೆ. ಕುವೆಂಪು ಪುತ್ರಿ ತಾರಿಣಿದೇವಿ ರಚಿಸಿರುವ ಮಗಳು ಕಂಡ ಕುವೆಂಪು ಕೃತಿಯಲ್ಲಿ ತೇಜಸ್ವಿ, ಇಂದುಕಲಾ, ತಾರಣಿದೇವಿ, ಕುಕಿಲೋದಯ ಚೈತ್ರ ಕೆರೆಯಲ್ಲಿ ಆಟವಾಡಲು ಹೋದಾಗ ಕುವೆಂಪು ಖುಷಿಯಾಗಿ ಮನೆಗೆ ಕರೆತರುತ್ತಿದ್ದದ್ದು, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಅಣ್ಣನ ನೆನಪು ಕೃತಿಯಲ್ಲಿ ತೇಜಸ್ವಿ ಹಾಗೂ ಸ್ನೇಹಿತರ ಬಳಗ ಮೀನು ಹಿಡಿಯುತ್ತಿದ್ದದ್ದು ಕೆರೆಯ ಇತಿಹಾಸವನ್ನೇ ಸಾರುತ್ತವೆ.

ಕೆರೆಯದು ಅದ್ಭುತ ನೈಸರ್ಗಿಕ ಪರಿಸರ. ಅತಿ ಸೂಕ್ಷ್ಮ ಜಲ, ನೆಲ, ಆಗಸ ಜೀವ ವೈವಿಧ್ಯತೆ ಇರುವ ಕೆರೆ, ನೂರಾರು ಜಾತಿಯ ಪಕ್ಷಿಗಳು, ಮೀನುಗಳು, ಸಸ್ಯರಾಶಿ ಇಲ್ಲಿ ಎಲ್ಲರನ್ನೂ ನಿಬ್ಬೆರ ಗಾಗಿಸುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ 1864ರಲ್ಲಿ ಕಟ್ಟಿಸಿದ ಈ ಕೆರೆ ಒಂದು ಕಾಲದಲ್ಲಿ 10 ಸಾವಿರ ಎಕರೆ ಜಾಗಕ್ಕೆ ನೀರಾವರಿ, ಆರಂಭದ ಮೈಸೂರು ನಗರಕ್ಕೆ ಕುಡಿವ ನೀರನ್ನೂ ಒದಗಿ ಸುತ್ತಿತ್ತು. ಆದರೆ, ಒಳಚರಂಡಿ ನೀರಿನಿಂದಾಗಿ ಅಂದಿನ ಭವ್ಯ ಪರಿಸರದ ಕೆರೆ ಈಗ ಕೊಳೆತು ನಾರುವ ಗಬ್ಬು ತಾಣವಾಗಿದೆ. ಈ ಕೆರೆಯಲ್ಲೂ ಮೊಸಳೆ ಇದ್ದು, ಪ್ರವಾಸಿಗರು ಎಚ್ಚರದಿಂದಿ ರುವುದು ಅಗತ್ಯ.

ಒಂದೆಡೆ ರಸಋಷಿ ರಾಷ್ಟ್ರಕವಿ ಆದ ಕುವೆಂಪು ನೆನಪು, ಅವರ ಮಗ ಪೂರ್ಣಚಂದ್ರ ತೇಜಸ್ವಿ ಅವರ ತಿರುಗಾಟ, ಮೈಸೂರು ವಿಶ್ವವಿದ್ಯಾನಿಲಯದ ಪರಿಸರ, ಮೈಸೂರು ಅರಮನೆ ಅರಸರ ಕೊಡುಗೆ, ಮೈಸೂರಿನ ಪ್ರಾಕೃತಿಕ ಸೌಂದರ್ಯ ಜೊತೆಗೆ ಪಕ್ಷಿಗಳ ಹಾರಾಟದ ನಡುವೆ ಕುಕ್ಕರಹಳ್ಳಿ ಕೆರೆ ನೋಡಲು ಬಲುಚಂದ ಬನ್ನಿ ಒಮ್ಮೆ ಪ್ರವಾಸಕ್ಕೆ...

– ರಮೇಶ ನಾಯ್ಕ, ಉಪ್ಪುಂದ, ಬೈಂದೂರು



# ಪೌರಾಣಿಕ ನಾಟಕಗಳು ಸಾಮಾಜಿಕ ಪರಿವರ್ತನೆಗೆ ಪ್ರೇರಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಹಿಳಾ ಪೌರಾಣಿಕ ನಾಟಕಗಳು ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದು, ಸಾಮಾಜಿಕ ಹಾಗೂ ಸಾಹಿತ್ಯಿಕ ವಲಯಗಳಲ್ಲಿ ಮಹತ್ತರ ಪಾತ್ರ ವಹಿಸಿವೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಪಟ್ಟಣದ ಮಾಧ್ಯಮಿಕ ಶಾಲಾ ಆವರಣದಲ್ಲಿ ಶ್ರೀ ಚಾಮುಂಡೇಶ್ವರಿ ಹಾಗೂ ಶ್ರೀ ಕನ್ನಡಾಂಬೆ ಕಲಾಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಉದ್ಘಾಟಿಸಿ ಮಾತನಾಡಿದ ಅವರು, ಮಹಾಭಾರತ, ರಾಮಾಯಣ ಹಾಗೂ ಇತರ ಪೌರಾಣಿಕ ನಾಟಕಗಳು ಸಾಮಾಜಿಕ ಪರಿವರ್ತನೆಗೆ ಪ್ರೇರಣೆಯಾಗಿವೆ. ಈ ನಾಟಕಗಳು ಮಹಿಳಾ ಶಕ್ತಿಯ ಅನಾವರಣ ಹಾಗೂ ಪೌರಾಣಿಕ ಕಥೆಗಳ ಮೂಲಕ ನೈತಿಕ ಸಂದೇಶವನ್ನು ನೀಡುವಲ್ಲಿ ಪ್ರಮುಖ ಪಾತ್ರವಹಿಸಿವೆ. ನಾಟಕದಲ್ಲಿ ಮಹಿಳಾ ಕಲಾವಿದರು



ಭಾಗವಹಿಸುವುದರಿಂದ ಮಹಿಳಾ ಸಬಲೀಕರಣ ಹಾಗೂ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣವಾಗುತ್ತದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಮಹಿಳಾ ನಾಟಕಗಳಲ್ಲಿ ಪುರಾಣ ಕಥೆಗಳ ಮಹಿಳಾ ಪಾತ್ರಗಳು ಧೈರ್ಯ, ಆತ್ಮವಿಶ್ವಾಸ ಮತ್ತು ತಮ್ಮದೇ ಆದ ಕಲಾ ಪ್ರೌಢಿಮೆಯನ್ನು ಅನಾವರಣಗೊಳಿಸಲು, ಪ್ರಾಯೋಗಿಕ ವಿಮರ್ಶೆ, ಪಾತ್ರಗಳಿಗೆ ಜೀವ ತುಂಬುವಲ್ಲಿ ಮಹಿಳಾ ಕಲಾವಿದರು ರಂಗಭೂಮಿಗೆ ಹೊಸ ಸ್ಪಂದನೆ ನೀಡುತ್ತಿದ್ದಾರೆ. ಪೌರಾಣಿಕ ನಾಟಕ ಮೆರುಗು ನೀಡಿದ್ದು, ಎಲ್ಲಾ ಪಾತ್ರಗಳಲ್ಲಿ ಮಹಿಳೆಯರೇ ಅಭಿನಯ ಮಾಡಿರುವುದು ಗಮನರ್ಹವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸೂತ್ರಧಾರಿ, ಸಾತ್ಯಕಿ ಹಾಗೂ ದ್ರೋಣನ ಪಾತ್ರದಲ್ಲಿ ಶಶಿಕಲಾ ಚಂದ್ರಶೇಖರ್, ಶ್ರೀಕೃಷ್ಣನ-ಮಮತಾದಿನೇಶ್, ದುರ್ಯೋಧನ-ಜೆ.ಎನ್.ಯಶಸ್ವಿನಿ, ಧರ್ಮರಾಯ-ಕುಶಲಮತಿ ಸುಬ್ಬೇಗೌಡ, ಕರ್ಣ-ಕಾವ್ಯ, ಭೀಮ-ಭುವನೇಶ್ವರಿ, ಶಕುನಿ-ರಾಧಾ ರುದ್ರೇಶ್, ಅರ್ಜುನ - ಹೇಮಾವತಿ ನಾಗೇಶ್, ಧೃತರಾಷ್ಟ್ರ ಹಾಗೂ ಕುಂತಿ-ರಾಧಾ ಪುಟ್ಟಣ್ಣ, ವಿದುರ-ಪುಷ್ಪ ಸೋಮಶೇಖರ್, ಸೈಂಧವ-ವೀಣಾ ಅಶೋಕ್, ಭೀಷ್ಮ-ವಸಂತ, ಅಭಿಮನ್ಯು-ಪ್ರಿಯಾಂಕ, ರುಕ್ಮಿಣಿ-ರಾಣಿ, ಗಾಂಧಾರಿ -ಶಾಂತ ದೇವರಾಜ್, ದ್ರೌಪದಿ-ಎಸ್.ಬಿ. ದ್ರಾಕ್ಷಾಯಿಣಿ, ಉತ್ತರೆ-ಪ್ರಿಯ ಬಾಲ ಕೃಷ್ಣನ ಪಾತ್ರದಲ್ಲಿ ಲೇಕ್ಷಣ, ಶಾರ್ವಿ ಸಂತೋಷ್, ತಾಸ್ಸಿ ಸಂಜಯ್, ನರ್ತಕಿಯ ಪಾತ್ರದಲ್ಲಿ ತ್ರಿಷಾ, ಕೀರ್ತಿ ನಟಿಸಿ ಗಮನ ಸೆಳೆದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎನ್.ಲೋಕೇಶ್ ಹಡೇನಹಳ್ಳಿ, ಮುಂತಾದವರಿದ್ದರು.

# ರಕ್ತದಾನ ಅತ್ಯಂತ ಶ್ರೇಷ್ಠ ದಾನ

• ಪ್ರಜೋದಯ ವರದಿ

**ಸಕಲೇಶಪುರ:** ನಿಯಮಿತವಾಗಿ ರಕ್ತದಾನ ಮಾಡಿದರೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಭಾನುವಾರ ಪಟ್ಟಣದ ಪುರಭವನದಲ್ಲಿ ಹಿಂದು ಹಿತರಕ್ಷಣಾ ವೇದಿಕೆ, ಹಾಸನ ರಕ್ತ ಕೇಂದ್ರ, ಜೀವ ರಕ್ತ ನಿಧಿ ಹಾಗೂ ಇತರ ಸಂಘಟನೆಗಳ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರವನ್ನು ಉದ್ದೇಶಿಸಿ ಮಾತನಾಡಿ, ರಕ್ತಕ್ಕೆ ಪರ್ಯಾಯವಾದ ಅಮೃತ ಮತ್ತೊಂದಿಲ್ಲ. ರಕ್ತ ಕೊಡುವುದರಿಂದ ನಿಶಕ್ತರಾಗುತ್ತಾರೆಂಬ ಭಾವನೆ ಕೆಲವರಲ್ಲಿ ಇದೆ. ಇದು ತಪ್ಪು ಅಭಿಪ್ರಾಯವಾಗಿದ್ದು, ರಕ್ತದಾನ ಮಾಡುವುದರಿಂದ ಯಾವುದೇ ದುಷ್ಪರಿಣಾಮವಾಗುವುದಿಲ್ಲ ಎಂದರು.

ಅಪಘಾತ, ಅನಾರೋಗ್ಯಗಳ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಹೆಚ್ಚಾಗಿ ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡಲು ಪ್ರತಿಯೊಬ್ಬರು ಮುಂದಾಗಬೇಕು. ಹಿಂದೂ ಹಿತರಕ್ಷಣಾ ವೇದಿಕೆ



ಪ್ರತಿವರ್ಷ ರಕ್ತದಾನ ಶಿಬಿರವನ್ನು ಆಯೋಜಿಸುತ್ತಿರುವುದು ಸಂತೋಷದ ವಿಷಯ. ರಕ್ತದಾನದ ಜೊತೆಗೆ ಅಂಗಾಂಗಳ ದಾನವನ್ನು ಮಾಡಲು ಸಹ ನೊಂದಣಿ ಮಾಡಿಸಿಕೊಳ್ಳಲು ಪ್ರತಿಯೊಬ್ಬರು ಮುಂದಾಗಬೇಕೆಂದು ತಿಳಿಸಿದರು.

ಹಿಂದೂ ಹಿತ ರಕ್ಷಣಾ ವೇದಿಕೆಯ ರಾಜ್ಯ ಮುಖಂಡ ರಘು ಸಕಲೇಶಪುರ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವು ಸಂಘಟನೆ ವತಿಯಿಂದ ಅಯೋಧ್ಯೆ ಹೋರಾಟದಲ್ಲಿ ಬಲಿಯಾದವರ ಜ್ಞಾಪಕಾರ್ಥವಾಗಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಸುಮಾರು 200ಕ್ಕೂ ಹೆಚ್ಚುಮಂದಿ ರಕ್ತದಾನ ಮಾಡಿರುವುದು ಸಂತೋಷದ ವಿಷಯ ಎಂದರು.

ನಗರ ಠಾಣೆ ಆರಕ್ಷಕ ನಿರೀಕ್ಷಕ ವನರಾಜ್ ಹಾಗೂ ಆರಕ್ಷಕ ವೃತ್ತ ನಿರೀಕ್ಷಕ ಮಹಾಂತೇಶ್ ಪಾಟೀಲ್ ಕಾರ್ಯಕ್ರಮಕ್ಕೆ ಭೇಟಿ ನೀಡಿದರು.

ಡಾ.ಸುಧಾಕರ್, ಮುಖಂಡರಾದ ಲಕ್ಷ್ಮೀರಂಗನಾಥ್, ಪ್ರತಾಪ್ ಹೆತ್ತೂರು, ನಾರಾಯಣ ಆಳ್ವ, ರಾಜು, ಬಾಬುಜೀ ನಗರ್ ವಾಲ್, ಮಂಜುನಾಥ್ ಕಬ್ಬಿನಗದ್ದೆ, ಹಿಂದೂ ಕಾರ್ಯಕರ್ತರಾದ ಕೌಶಿಕ್, ಶಿವು ಜಿಪ್ಪಿ, ದುಷ್ಯಂತ್‌ಗೌಡ ಹಾಜರಿದ್ದರು.

## ಅಕ್ರಮವಾಗಿ ಸಾಗಿಸುತ್ತಿದ್ದ 30 ಕರುಗಳ ರಕ್ಷಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಬಳಿ ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ 30 ಕರುಗಳನ್ನು ಭಾನುವಾರ ರಕ್ಷಣೆ ಮಾಡಲಾಗಿದೆ.

ಹಿರೀಸಾವೆ ಗ್ರಾಮದ ಅವಿನಾಶ್ ಮತ್ತು ಕುಮಾರಸ್ವಾಮಿ ಬೆಳಿಗ್ಗೆ 5 ಗಂಟೆ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಕದಬಳ್ಳಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಸ್ಕಾರ್ಪಿಯೋ ಕಾರ್‌ನಲ್ಲಿ ಕರುಗಳು ಕಿರುಚುವ ಶಬ್ದ ಕೇಳಿದೆ.

ಮೇಟಿಕೆರೆ ಗೇಟ್ ಬಳಿ ಕಾರನ್ನು ಅಡ್ಡಗಟ್ಟಿ ತಡೆದಿದ್ದಾರೆ. ಚಾಲಕ ವಾಹನವನ್ನು ನಿಲ್ಲಿಸಿ ಅಲ್ಲಿಂದ ಪರಾರಿಯಾಗಿದ್ದಾನೆ. 30 ಕರುಗಳನ್ನು ಒಂದರ ಮೇಲೊಂದರಂತೆ ಅಮಾನವೀಯವಾಗಿ ತುಂಬಿರುವುದು ಕಂಡು ಬಂದಿದೆ.

ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದು ಕರುಗಳನ್ನು ರಕ್ಷಣೆ ಮಾಡಲಾಗಿದೆ. ಅವುಗಳನ್ನು ಅರಸೀಕೆರೆ ಗೋ ಶಾಲೆಗೆ ಬಿಡಲಾಗಿದೆ. ಈ ಬಗ್ಗೆ ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದೂ ಪೊಲೀಸರು ವಾಹನವನ್ನು ವಶಕ್ಕೆ ಪಡೆದಿದ್ದಾರೆ.

# ನಾಡು-ನುಡಿ ಏಳಿಗೆಗೆ ನಾವೆಲ್ಲ ಶ್ರಮಿಸೋಣ



• ಪ್ರಜೋದಯ ವರದಿ

**ಅರಕಲಗೂಡು:** ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಡಿ. ದೇವರಾಜ ಅರಸು ಅವರನ್ನು ನೆನಪು ಮಾಡಿಕೊಳ್ಳುವುದು ಅಗತ್ಯ. ದೇಶದ ಸಂಪದ್ಭರಿತ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದು ನಾಡು, ನುಡಿಯ ಏಳಿಗೆಗಾಗಿ ನಾವೆಲ್ಲ ಶ್ರಮಿಸಲು ಪಣ ತೊಡೋಣ ಎಂದು ಶಾಸಕ ಎ. ಮಂಜು ಅವರು ತಿಳಿಸಿದರು.

ಪಟ್ಟಣದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ 70ನೇ ಕನ್ನಡ ರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಹಶೀಲ್ದಾರ್ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಸಂದೇಶ ನೀಡಿದರು. ರಾಜ್ಯ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ತಾಲ್ಲೂಕಿನ ಹೆಣ್ಣೂರು ಕೊಂಗಳಲೆ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಮಾನ್ಯ, ಎಂ.ಪಿ.ಭವಿತ, ಕೆ.ಕೆ. ಸುಚಿತ್ರ, ಬಿ.ಆರ್.ತೇಜಸ್ವಿನಿ, ವರಲಕ್ಷ್ಮಿ, ಸಮೀಕ್ಷಾ, ಸೋಫಿಯಾ, ಎಂ.ಕೆ.ಯಶಸ್ವಿನಿ, ಕೆ.ಎಸ್.ಲಿಖಿತ, ದೈಹಿಕ ಶಿಕ್ಷಣ ಶಿಕ್ಷಕರಾದ ಬಿ.ಜಿ. ಗಣೇಶ್, ಎಚ್.ಎಂ.ರವಿಕುಮಾರ್, ಪತ್ರಕರ್ತ ಎ.ಎಸ್.ಸಂತೋಷ್, ಕೀಲುಕುದುರೆ ಕಲಾವಿದ ದಿವಾಕರ್, ತಾಲ್ಲೂಕು ಕಚೇರಿ ದ್ವಿತೀಯ ದರ್ಜೆ ಸಹಾಯಕ ಉಜ್ವಲ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಪಟ್ಟಣ ಪಂಚಾಯಿತಿ ಅಧ್ಯಕ್ಷ ಎಸ್.ಎಸ್.ಪ್ರದೀಪ್ ಕುಮಾರ್, ಉಪಾಧ್ಯಕ್ಷ ಸುಬಾನ್ ಷರೀಫ್, ಸದಸ್ಯರಾದ ಕೃಷ್ಣಯ್ಯ, ಹೂವಣ್ಣ, ಅಬ್ದುಲ್ ಬಾಸಿದ್, ಶಾರದ, ಅನುಷಾ, ಲಕ್ಷ್ಮೀ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜ್, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡ ಕಲಿಸುವ ಜವಾಬ್ದಾರಿ ಪೋಷಕರದ್ದು: ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ನೈಸರ್ಗಿಕ ಸೌಂದರ್ಯ, ಕಲೆ, ಶಿಲ್ಪ ಮತ್ತು ಇತಿಹಾಸದಲ್ಲಿ ಸಮೃದ್ಧವಾದ ಕರ್ನಾಟಕ ರಾಜ್ಯದ ನಾಗರಿಕರಾಗಿರುವುದು ನಮ್ಮ ಪುಣ್ಯ. ಕನ್ನಡ ನಮ್ಮ ಅಸ್ತಿತ್ವ ಮತ್ತು ಆತ್ಮ. ಅದನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.



ಪಟ್ಟಣದ ಸುಭಾಷ್ ಮೈದಾನದಲ್ಲಿ ನಡೆದ 70ನೇ ಕನ್ನಡ ರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದಿನ ಪೋಷಕರು ಮಕ್ಕಳಿಗೆ ಇಂಗ್ಲಿಷ್‌ಗೆ ಆದ್ಯತೆ ನೀಡುತ್ತಿದ್ದು, ಕನ್ನಡ ಮಾತನಾಡುವುದನ್ನು ಮರೆತಿದ್ದಾರೆ. ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ, ಅದು ನಮ್ಮ ಸಂಸ್ಕೃತಿ ಮತ್ತು ಗುರುತಿನ ಭಾಗ. ಮನೆಯಿಂದಲೇ ಮಕ್ಕಳಿಗೆ ಕನ್ನಡ ಕಲಿಸುವ ಜವಾಬ್ದಾರಿ ಪೋಷಕರದು ಎಂದರು.

ಸರ್ಕಾರ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳು ಭಾಷೆಯ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಪ್ರತಿಯೊಂದು ಶಾಲೆಯಲ್ಲೂ ಕನ್ನಡ ಅಕ್ಷರ, ಲಿಪಿ ಮತ್ತು ವಿಷಯಗಳಿಗೆ ಪ್ರಾಮುಖ್ಯತೆ ನೀಡ ಬೇಕು. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳಲ್ಲಿ ಕನ್ನಡಾಭಿಮಾನ ಬೆಳೆಸಲು ಶಿಕ್ಷಣ ಇಲಾಖೆ ಮುಂದಾಗಬೇಕೆಂದು ಸಲಹೆ ನೀಡಿದರು.

ವಿದೇಶದಲ್ಲಿಯೂ ಕನ್ನಡಿಗರು ಕನ್ನಡದ ಪ್ರೀತಿಯನ್ನು ಉಳಿಸಿಕೊಂಡಿದ್ದಾರೆಂದರು. ದುಬೈ ಹಾಗೂ ಇತರೆ ದೇಶಗಳಲ್ಲಿ ಕನ್ನಡ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದು, ನಮ್ಮ ನಾಡಿನ ಸಂಸ್ಕೃತಿಯನ್ನು ಉಳಿಸಲು ಮಾದರಿಯಾಗಿವೆ. ಮೈಸೂರು ಮಹಾರಾಜರ ಸೇವೆಯನ್ನು ಸ್ಮರಿಸಿದರು. ಮೈಸೂರು ಮಹಾರಾಜರು ವಿದ್ಯುತ್ ಸರಬರಾಜು ಹಾಗೂ ವಿಶ್ವವಿದ್ಯಾಲಯ ಸ್ಥಾಪನೆಯ ಮೂಲಕ ರಾಜ್ಯದ ಅಭಿವೃದ್ಧಿಗೆ ಅಡಿಪಾಯ ಹಾಕಿದರು. ಅವರ ತ್ಯಾಗದಿಂದಲೇ ಇಂದಿನ ಕರ್ನಾಟಕ ಪ್ರಗತಿಯ ಹಾದಿಯಲ್ಲಿ ಇದೆ ಎಂದು ಗೌರವ ವ್ಯಕ್ತಪಡಿಸಿದರು.

ಉಪವಿಭಾಗಾಧಿಕಾರಿ ರಾಜೇಶ್ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಸ್ವಾತಂತ್ರ್ಯದಿಂದ ಇಂದಿನವರೆಗೆ ಅನೇಕ ದೇಶಗಳಲ್ಲಿ ಭಾಷೆ ಮತ್ತು ಸಂಸ್ಕೃತಿ ನಶಿಸಿದ ಉದಾಹರಣೆಗಳಿವೆ. ತಾಯಿ ಭಾಷೆಯಲ್ಲಿ ಶಿಕ್ಷಣ ಪಡೆದರೆ ವ್ಯಕ್ತಿಯ ಸರ್ವತೋಮುಖ ವಿಕಾಸ ಸಾಧ್ಯ. ಹೆಚ್ಚಿನ ಜ್ಞಾನಕ್ಕಾಗಿ ಬೇರೆ ಭಾಷೆ ಕಲಿತರೂ, ಮನೆಯ ಮಾತು ಹಾಗೂ ಪ್ರಾಥಮಿಕ ಶಿಕ್ಷಣ ತಾಯಿ ಭಾಷೆಯಾದ ಕನ್ನಡದಲ್ಲೇ ಇರಬೇಕು. ಭಾಷೆಯ ಉಳಿವು ನಮ್ಮ ನಿತ್ಯಜೀವನದಲ್ಲಿ ಕನ್ನಡ ಬಳಕೆಯಲ್ಲಿದೆ ಎಂದು ವಿದ್ಯಾರ್ಥಿ ಪೋಷಕರಿಗೆ ಕರೆ ನೀಡಿದರು. ಭಾಷಾ ಆಧಾರದ ಮೇಲೆ ರಾಜ್ಯಗಳ ಪುನರ್‌ರಚನೆಯ ಹೋರಾಟದ ಫಲವಾಗಿ ನ.1ರಂದು ಮೈಸೂರು ರಾಜ್ಯ (ಈಗಿನ ಕರ್ನಾಟಕ) ಹುಟ್ಟಿಕೊಂಡಿತು. ಆಲೂರು ವೆಂಕಟರಾಯರು, ಬೇಂದ್ರೆ, ಕುವೆಂಪು ಮುಂತಾದ ಗಣ್ಯರ ತ್ಯಾಗದಿಂದ ಕನ್ನಡ ರಾಜ್ಯ ನಿರ್ಮಾಣ ಸಾಧ್ಯವಾಯಿತು ಎಂದರು.

ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಕನ್ನಡ ಭಾರತದ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದು. ಪಂಪ, ರನ್ನ, ಬಸವಣ್ಣ, ದಾಸರು ಮತ್ತು ನವ್ಯಕಾಲದ ಕವಿಗಳು ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡದ ಗೌರವದ ಸಂಕೇತ. ಕನ್ನಡ ನಮ್ಮ ಗುರುತು, ಹೆಮ್ಮೆ ಮತ್ತು ಅಸ್ತಿತ್ವ. ಭಾಷೆಯ ಉಳಿವು ಪ್ರತಿಯೊಬ್ಬರ ಜವಾಬ್ದಾರಿ ಎಂದು ಹೇಳಿದರು.

ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಯಿತು. ಪುರಸಭೆ ವ್ಯಾಪ್ತಿಯ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವು ನೋಡುಗರ ಗಮನ ಸೆಳೆಯಿತು. ಪುರಸಭೆ ಅಧ್ಯಕ್ಷೆ ಜ್ಯೋತಿ ರಾಜಕುಮಾರ್, ಉಪಾಧ್ಯಕ್ಷೆ ಝರೀನಾ, ತಹಶೀಲ್ದಾರ್ ಸುಪ್ರಿತ್, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಗಂಗಾಧರ, ಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ ಇತರರು ಉಪಸ್ಥಿತರಿದ್ದರು.

# ಅವೈಜ್ಞಾನಿಕ ಕಾಮಗಾರಿ: ರಸ್ತೆ ದುರಸ್ತಿಗೆ ಒತ್ತಾಯ



• ಪ್ರಜೋದಯ ವರದಿ

**ಆಲೂರು:** ಕಳೆದ ಒಂದು ವಾರದ ಹಿಂದೆ ಸುರಿದ ಹಿಂಗಾರು ಮಳೆ ಆರ್ಭಟಕ್ಕೆ ರಾಷ್ಟ್ರೀಯ ಹೆದ್ದಾರಿ ಭೈರಾಪುರದಿಂದ ಸಮೀಪದ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಹಲವು ರಸ್ತೆಗಳು ದುರಸ್ತಿಗೀಡಾಗಿವೆ.

ಕಸಬಾ ಭೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಿಂದ ಸೊಪ್ಪಿನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ರಾಷ್ಟ್ರೀಯ ಹೆದ್ದಾರಿಯ ಅವೈಜ್ಞಾನಿಕ ಕಾಮಗಾರಿಯಿಂದಾಗಿ, ಸುಮಾರು ಅರ್ಧ ಕಿಲೋ ಮೀಟರ್ ರಸ್ತೆ ಕೊರಕಲಾಗಿ ಓಡಾಟಕ್ಕೆ ತೊಂದರೆಯಾಗಿದೆ.

ಇತ್ತೀಚೆಗೆ ಬೆಂಗಳೂರಿನ ಪ್ರತಿಷ್ಠಿತ ಇಸ್ಕಾನ್ ದೇವಾಲಯದ ಸಹಯೋಗದಿಂದ ನಿರ್ಮಿಸಲಾಗಿರುವ ಶ್ರೀ ಆಂಜನೇಯಸ್ವಾಮಿ ಪುತ್ಥಳಿ ಸುತ್ತಲೂ ಮಳೆ ನೀರು ಹಾಗೂ ಭೈರಾಪುರ ಗ್ರಾಮದ ಗೃಹ ಹಾಗೂ ವಾಣಿಜ್ಯ ಕಟ್ಟಡಗಳ ಬಚ್ಚಲು ಹಾಗೂ ತ್ಯಾಜ್ಯ ನೀರು ಹೆದ್ದಾರಿಯಲ್ಲಿ ಹರಿದು, ಸಂಗ್ರಹವಾಗುತ್ತಿರುವುದರಿಂದ ರೋಗರುಜಿನಗಳಿಗೆ ಕಾರಣವಾಗಿದೆ. ಇದೆ ನೀರು ರಾಷ್ಟ್ರೀಯ ಹೆದ್ದಾರಿಯಿಂದ ಸೊಪ್ಪಿನಹಳ್ಳಿ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಹರಿದು ಕೊರಕಲು ಬಿದ್ದು ದ್ವಿಚಕ್ರ ವಾಹನಗಳು ಸಹ ಓಡಾಡದಂತೆ ಆಗಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಮುರಳಿ ಮೋಹನ್ ಹಾಗೂ ಕಾರ್ಯಕರ್ತರು, ಸ್ಥಳೀಯ ಗ್ರಾಮಸ್ಥರೊಂದಿಗೆ ಸ್ಥಳವನ್ನು ವೀಕ್ಷಿಸಿ ಕೊರಕಲು ಬಿದ್ದ ರಸ್ತೆಯನ್ನು ಶೀಘ್ರವಾಗಿ ಸರಿಪಡಿಸುವಂತೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಅಧಿಕಾರಿಗಳಿಗೆ ದೂರವಾಣಿ ಮೂಲಕ ಕರೆ ಮಾಡಿ ತಿಳಿಸಿದರು.

ಭೈರಾಪುರ ಗ್ರಾಮದ ಹೃದಯ ಭಾಗದಿಂದ ರಾಷ್ಟ್ರೀಯ ಹೆದ್ದಾರಿ 75 ರ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಹಾಗೂ ಸೇವಾರಸ್ತೆಯೊಂದಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸದ ಕಾರಣ, ಗ್ರಾಮದ ನೀರು ಸುಮಾರು ಅರ್ಧ ಕಿಲೋ ಮೀಟರ್ ದೂರದಿಂದ ಶ್ರೀ ವಿಜಯ ಆಂಜನೇಯ ದೇವರ ಕೆರೆಗೆ ನೀರು ಹರಿದು ಬಂದು ರಸ್ತೆಯು ಹಳ್ಳಕೊಳ್ಳದಂತಾಗಿದೆ.

ರಾಷ್ಟ್ರೀಯ ಹೆದ್ದಾರಿ 75 ಕಾಮಗಾರಿ ವೇಳೆ ಸರ್ವಿಸ್ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದಾಗಿ ಅಧಿಕಾರಿಗಳು ನೀಡಿದ್ದ ಭರವಸೆಯಿಂದ ದೂರ ಸರಿದಿದ್ದಾರೆ. ಈ ಬಗ್ಗೆ ಪಂಚಾಯಿತಿ ಅಧಿಕಾರಿಗಳಾಗಲಿ ಜನಪ್ರತಿನಿಧಿಗಳಾಗಲಿ ಸೂಕ್ತ ಕ್ರಮ ತೆಗೆದುಕೊಂಡಿಲ್ಲ.

ಕೂಡಲೆ ತ್ಯಾಜ್ಯ ನೀರು ದೇವರ ಸನ್ನಿದಿಗೆ ಸೇರದಂತೆ ಮತ್ತು ಸೊಪ್ಪಿನಹಳ್ಳಿ ಗ್ರಾಮಕ್ಕೆ ರಸ್ತೆ ದುರಸ್ತಿ ಮಾಡಿಕೊಡಬೇಕು ಮತ್ತು ಚರಂಡಿ ವ್ಯವಸ್ಥೆ ಮಾಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಪ್ರತಿಭಟನೆ ಮಾಡುವುದಾಗಿ ಗ್ರಾಮಸ್ಥರು ಎಚ್ಚರಿಸಿದ್ದಾರೆ.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಪೃಥ್ವಿ ಜಯರಾಮ್, ದೇವಸ್ಥಾನ ಸಮಿತಿ ಸದಸ್ಯರಾದ ಬಾಲಕೃಷ್ಣ, ಕೃಷ್ಣೇಗೌಡ, ದೇವರಾಜು, ನಂಜುಂಡ, ಪ್ರಭು, ಶಂಬೇಗೌಡ, ಕಾರ್ಯಕರ್ತ ಅಜೇನಹಳ್ಳಿ ಲೋಕೇಶ್ ಇತರರು ಇದ್ದರು.

# ಹೊ.ನ.ಪುರದಲ್ಲಿ ಕನ್ನಡ ರಾಜ್ಯೋತ್ಸವ



• ಪ್ರಜೋದಯ ವರದಿ

**ಹೊಳೆನರಸೀಪುರ:** ಅತಿ ಹೆಚ್ಚು ಜ್ಞಾನಪೀಠ ಪುರಸ್ಕೃತರನ್ನು ಹೊಂದಿರು ಸಾಹಿತ್ಯ ಮತ್ತು ಸಂಸ್ಕೃತಿ ಭರಿತ ಕನ್ನಡ ನಾಡಿನಲ್ಲಿ ಜನಿಸಿದ ನಾವು ಧನ್ಯರು ಎಂದು ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ಹೆಗ್ಗಳಿಕೆ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ತಾಲ್ಲೂಕು ಆಡಳಿತ ಆಚರಿಸಿದ ಕನ್ನಡ ರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸುಭೀಕ್ಷತೆಯ ನಾಡಿಗೆ ಹೆಮ್ಮೆ ತರುವ ನಿಟ್ಟಿನಲ್ಲಿ ನಮ್ಮ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಲು ಪಣ ತೊಡಬೇಕಿದೆ. ಈ ನಾಡಿನ ಅಭ್ಯುದಯಕ್ಕೆ ಎಷ್ಟೋ ಮಹನೀಯರು ಶ್ರಮಿಸಿದ್ದಾರೆ. ಅದರ ಪ್ರತಿಫಲ ಕನ್ನಡ ಏಕೀಕರಣ ಮತ್ತು ಭಾಷಾ ಸಾರ್ವಭೌಮತ್ವ ಹೊಂದಲು ಸಾಧ್ಯ. ರೈತರ ಮತ್ತು ಕಾರ್ಮಿಕರ ಬದುಕು ಹಸನಾಗಬೇಕು. ಗಡಿ ಪ್ರಾಂತ್ಯದ ವಿವಾದಗಳು ಶಾಂತಿಯುತವಾಗಿ ಬಗೆಹರಿಯಬೇಕಿದೆ ಎಂದರು.

ಉಪನ್ಯಾಸಕಿ ಜಯಶೀಲಮ್ಮ ಮಾತನಾಡಿ, ಸಂಪತ್ಭರಿತ ಕನ್ನಡ ನಾಡಿನ ನುಡಿ ನಿತ್ಯ ವೇದ ಘೋಷವಾಗಬೇಕಿದೆ. ಪ್ರತಿಯೊಬ್ಬ ಕನ್ನಡಿಗನಲ್ಲಿ ಹೆಮ್ಮೆಯ ಕಿಚ್ಚು ಅಮರವಾಗಬೇಕಿದೆ ಎಂದರು.

ಪಟ್ಟಣ ಸೇರಿ ಹಳ್ಳಿಮೈಸೂರು ಭಾಗದ ಶಾಲಾ-ಕಾಲೇಜುಗಳ ಮಕ್ಕಳು ಆಕರ್ಷಕ ಪಥ ಸಂಚಲನ ನಡೆಸಿದರು. ನಾನಾ ಪೌಢಶಾಲೆ ಮಕ್ಕಳು ನೃತ್ಯ ಪ್ರದರ್ಶನ ನೀಡಿ, ಕನ್ನಡದ ಕಹಳೆ ಮೊಳಗಿಸಿದರು. ಪಟ್ಟಣದಲ್ಲಿ ಕನ್ನಡಾಂಬೆಯ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ 200 ಅಡಿ ಬಾವುಟ ಹಿಡಿದು ಮೆರವಣಿಗೆಯಲ್ಲಿ ಆಕರ್ಷಣೆ ಮೆರೆದರು. ಕರವೇ ಕಾರ್ಯಕರ್ತರು ಬಾವುಟದೊಂದಿಗೆ ಬೈಕ್‌ರ್‍ಯಾಲಿ ನಡೆಸಿದರು. ಪ್ರಗತಿಪರ ರೈತರು ಹಾಗು ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

# ಶಿಕ್ಷಣಕ್ಕೆ ಒತ್ತು ನೀಡಲು ಎ.ಮಂಜು ಸಲಹೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಯಾರೇ ಆಗಲಿ ಶಿಕ್ಷಣಕ್ಕೆ ಒತ್ತು ಕೊಡುವ ಕೆಲಸ ಮಾಡಬೇಕು. ಗ್ರಾಮೀಣ ಹೆಣ್ಣುಮಕ್ಕಳು ಆಯಾ ಗ್ರಾಮ ಭಾಗದಲ್ಲೇ ಉನ್ನತ ವ್ಯಾಸಂಗ ಮಾಡುವಂತಾಗ ಬೇಕೆಂದು ಶಾಸಕ ಎ.ಮಂಜು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಬಡ ಕುಟುಂಬದಲ್ಲಿ ಜನಿಸಿದವರೂ ವಿದ್ಯೆಯಿಂದ ವಂಚಿತರಾಗಬಾರದು. ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಶೈಕ್ಷಣಿಕ ಸವಲತ್ತು ನೀಡಬೇಕು. ಆಗ ಮಾತ್ರ ಶಾಲಾ- ಕಾಲೇಜುಗಳು ಉತ್ತಮ ಶಿಕ್ಷಣ ನೀಡಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರದ ಅನುದಾನಕ್ಕೆ ಕಾಯದೇ ಹಳ್ಳಿಮೈಸೂರು ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ಉಚಿತವಾಗಿ 4 ವರ್ಷಗಳಿಂದ ಕಾಲೇಜು ಅಭಿವೃದ್ಧಿ ಮಂಡಳಿ ಉಪಾಧ್ಯಕ್ಷ ಎ.ಸಿ. ಸೋಮಶೇಖರ್ ಮಾಡುತ್ತಿದ್ದಾರೆ. ಅವರೊಂದಿಗೆ ಕೆಲವರು ಕೈಜೋಡಿಸಿ ಸಹಕರಿಸಿದ್ದಾರೆ ಎಂದು ಪ್ರಶಂಸಿಸಿದರು.



ಶಾಸಕ ಎ.ಮಂಜು ಹುಟ್ಟುಹಬ್ಬ ಆಚರಿಸಿದ ಅಭಿಮಾನಿಗಳು ಕೇಕ್ ಕತ್ತರಿಸಿ ಸಿಹಿ ಹಂಚಿ ಸಂಭ್ರಮಿಸಿದರು. ನಾನು ಕನ್ನಡ ರಾಜ್ಯೋತ್ಸವ ದಿನದಂದೇ ಹುಟ್ಟಿದ್ದೇನೆ. ಇದು ರಾಜ್ಯವೇ ಗುರುತಿಸುವ ದಿನ ನಾನು ಹುಟ್ಟಿರುವುದು ನನ್ನ ಸೌಭಾಗ್ಯ. ನನ್ನ ತಂದೆ, ತಾಯಿಗೆ ಒಟ್ಟು 19 ಜನ ಮಕ್ಕಳಲ್ಲಿ ನಾನು 18 ನೇಯವನಾಗಿ ಜನಿಸಿದ್ದೇನೆ ಎಂದರು.

ಪ್ರಾಂಶುಪಾಲ ಮಹೇಶ್ ಅವರು ಮಾತನಾಡಿ, ಕನ್ನಡದ ಭಾಷೆ ಬೆಳವಣಿಗೆಗೆ ನಾವು ಶ್ರಮಿಸ ಬೇಕಿಲ್ಲ. ಅದಕ್ಕೆ ಪ್ರಾಶಸ್ತ್ಯ ಇದೆ. ನಾವು ಬಳಸಬೇಕಷ್ಟೆ ಎಂದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳಿಸಿದ 60 ವಿದ್ಯಾರ್ಥಿಗಳಿಗೆ ಹಾಗು ಶೈಕ್ಷಣಿಕ ಪ್ರಗತಿಗೆ ಕಾರಣರಾದ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಹಾಸನ ವಿ.ವಿ.ಕುಲಪತಿ ಪ್ರೊ. ಟಿ.ಸಿ.ತಾರಾನಾಥ್, ಪ್ರಾಂಶುಪಾಲ ವಿ.ಎಸ್.ರವೀಂದ್ರ, ಬಾಬು, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್.ಎಸ್ .ಪುಟ್ಟಸ್ವಾಮಪ್ಪ, ಮುಖಂಡರಾದ ಸಾಂಬ ಶಿವಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚಿನ್ನಮ್ಮ, ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯ ಬಾಬು, ದೇವರಾಜೇಗೌಡ, ಶಿವಮ್ಮ ಇದ್ದರು.

## ಡಾ.ಮಿಂಚು ಸಾಧನೆಗೆ ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ಬೆಂಗಳೂರಿನಲ್ಲಿ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪಿ.ಆರ್. ಮಿಂಚು ಅವರು ಆಂಗ್ಲ ಭಾಷೆಯ ಪುಸ್ತಕವೊಂದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬಿಡುಗಡೆ ಮಾಡಿದ್ದಾರೆ.

ಬೇಲೂರು ತಾಲ್ಲೂಕಿನ ಪಡುವಳಲು ಗ್ರಾಮದ ನಾಗರಾಜ್ ಮತ್ತು ಲೀಲಾ ನಾಗರಾಜ್ ಅವರ ಪುತ್ರಿ ಮಿಂಚು ಅವರು ವೈದ್ಯಕೀಯ ಪದವಿ ವ್ಯಾಸಂಗ ಮಾಡುತ್ತಿದ್ದರೂ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿನ ತಮ್ಮ ಆಸಕ್ತಿ ಮತ್ತು ಪ್ರೌಢಿಮೆಯಿಂದ ಗಮನಾರ್ಹ ಸಾಧನೆ ಮಾಡಿದ್ದಾರೆ.



## ಮಕ್ಕಳಿಗೆ ಶಿಕ್ಷಣದ ಜೊತೆಗೆ ವೈಜ್ಞಾನಿಕ ಮನೋಭಾವ ಅಗತ್ಯ




• ಪ್ರಜೋದಯ ವರದಿ

**ಅರಕಲಗೂಡು:** ಮಕ್ಕಳಿಗೆ ಶಿಕ್ಷಣದ ಜೊತೆಗೆ ವೈಜ್ಞಾನಿಕ ಮನೋಭಾವ ಮೂಡಿಸುವುದು ಅಗತ್ಯ ಎಂದು ದಕ್ಷಿಣ ಕೊರಿಯಾದಲ್ಲಿ ನೆಲೆಸಿರುವ ಅರಕಲಗೂಡು ತಾಲ್ಲೂಕು ಮೂಲದ ವಿಜ್ಞಾನಿ ಡಾ.ನಾಗರಾಜೇಗೌಡ ಅವರು ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಶನಿವಾರ ಏರ್ಪಡಿಸಿದ್ದ 70ನೇ ಕನ್ನಡರಾಜ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ವಿದ್ಯಾರ್ಥಿ ದೆಸೆಯಲ್ಲೇ ವಿಜ್ಞಾನ ಹಾಗೂ ಸಂಶೋಧನೆ ಕುರಿತು ಆಸಕ್ತಿ ಬೆಳೆಸಲು ಶಿಕ್ಷಕರು ಮತ್ತು ಪೋಷಕರು ಒತ್ತು ನೀಡಬೇಕು. ವಿದೇಶದಲ್ಲಿ ಉನ್ನತ ಶಿಕ್ಷಣ ಮತ್ತು ಪಿಹೆಚ್‌ಡಿ ಪಡೆಯಲು ಹೆಚ್ಚಿನ ಅವಕಾಶಗಳಿದ್ದು, ಮಧ್ಯವರ್ತಿಗಳ ಹಾವಳಿಗೆ ಬಲಿಯಾಗದೆ. ವ್ಯವಸ್ಥಿತ ರೀತಿಯಲ್ಲಿ ಅವಕಾಶಗಳನ್ನು ಬಳಸಿ ಕೊಳ್ಳುವಂತೆ ಸಲಹೆ ನೀಡಿದರು. ದಕ್ಷಿಣ ಕೊರಿಯಾದಲ್ಲಿ ಸಾಕಷ್ಟು ಮಂದಿ ಕನ್ನಡಿಗರಿದ್ದು ಕನ್ನಡ ಸಂಘ ರಚಿಸಿಕೊಂಡು ವಿವಿಧ ಚಟುವಟಿಕೆ ನಡೆಸಲಾಗುತ್ತಿದೆ ಎಂದರು.

ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿತಿ ಮಾತನಾಡಿ, ಕಲೆ, ಸಂಸ್ಕೃತಿ ಉಳಿದು ಬೆಳೆಯಬೇಕಾದರೆ ಮಾತೃಭಾಷೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕನ್ನಡ ಭಾಷೆಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಕನ್ನಡದಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುತ್ತಿರುವುದಾಗಿ ಹೇಳಿದರು.

ವಕೀಲ ಎ.ಆರ್.ಜನಾರ್ಧನ ಗುಪ್ತ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್. ಮಾದೇಶ್, ಉಪನ್ಯಾಸಕ ದಶರಥ ಮಾತನಾಡಿದರು. ವಿಜ್ಞಾನಿ ನಾಗರಾಜೇಗೌಡ, ಕನ್ನಡ ವಿಷಯದಲ್ಲಿ ಶೇ.100 ಅಂಕ ಪಡೆದ ಎಸ್.ಎಸ್.ಎಲ್.ಸಿ., ದ್ವಿತೀಯ ಪಿಯು ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಗೌರವಿಸಲಾಯಿತು. ಪಟ್ಟಣ ಪಂಚಾಯಿತಿ ಸದಸ್ಯರಾದ ಕೃಷ್ಣಯ್ಯ, ಹೂವಣ್ಣ, ನಿವೃತ್ತ ಪ್ರಾಂಶುಪಾಲ ಬಸವರಾಜ್, ಮುಖಂಡರಾದ ಪಾಂಡುರಂಗ, ವೀರೇಶ್, ನಸ್ರುಲ್ಲಾ, ಕಾಂತರಾಜ್, ನಿವೃತ್ತ ಶಿಕ್ಷಕ ಮಲ್ಲೇಶ್ ಉಪಸ್ಥಿತರಿದ್ದರು.

### ದುಶ್ಚಟಗಳಿಂದ ದೂರ ಇರುವಂತೆ ವಿದ್ಯಾರ್ಥಿಗಳಿಗೆ ವಿಜಯ್ ಸಂಪಂಗಿ ಸಲಹೆ

# ಆರೋಗ್ಯಕರ ಸಮಾಜ ನಿರ್ಮಾಣ ಯುವ ಜನತೆ ಕರ್ತವ್ಯ

• ಪ್ರಜೋದಯ ವರದಿ

**ಆಲೂರು:** ಯುವ ಜನತೆ ಮಾದಕ ವಸ್ತುಗಳ ಸೇವನೆಗೆ ಒಳಗಾಗದೆ ಆರೋಗ್ಯಕರ ಸಮಾಜ ನಿರ್ಮಿಸುವುದು ಪ್ರಮುಖ ಕರ್ತವ್ಯವಾಗಿದೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ಸರ್ಕಾರಿ ಸಹಾಯಕ ಅಭಿಯೋಜಕ ವಿಜಯ್ ಸಂಪಂಗಿ ಅವರು ತಿಳಿಸಿದರು.

ಪಟ್ಟಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಾಲಾ ಶಿಕ್ಷಣ ಇಲಾಖೆ ಹಾಗು ಲಯನ್ಸ್ ಸೇವಾ ಸಂಸ್ಥೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಕುರಿತು ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಭವ್ಯ ಭಾರತದ ಭವಿಷ್ಯವಾಗಿದ್ದು, ತಮ್ಮ ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವ ಅಥವಾ ಹಾಳುಮಾಡಿಕೊಳ್ಳುವ ಜವಾಬ್ದಾರಿ ಅವರದೇ ಆಗಿದೆ ಎಂದರು.

ಮಾದಕದ್ರವ್ಯದ ಪಿಡುಗಿನಿಂದ ಯುವಕ-ಯುವತಿಯರು ಹಾಗು




ವಿದ್ಯಾರ್ಥಿಗಳು ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಈ ದುಶ್ಚಟದ ದುಷ್ಪರಿಣಾಮದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯ. ಗಾಂಜಾ, ಅಫೀಮು, ಚರಸ್, ಬ್ರೌನ್ ಶುಗರ್ ಮೊದಲಾದ ಮಾದಕ ದ್ರವ್ಯಗಳ ವ್ಯಾಪಾರವನ್ನು ಸಂಪೂರ್ಣವಾಗಿ ಕೊನೆಗೊಳಿಸಬೇಕು. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಮಾದಕ ದ್ರವ್ಯಮುಕ್ತ ಭಾರತವನ್ನು ನಿರ್ಮಿಸುವ ನಿಟ್ಟಿನಲ್ಲಿ ಗಂಭೀರವಾಗಿ ಕೆಲಸ ಮಾಡುತ್ತಿದೆಂದು ಹೇಳಿದರು.

ಡ್ರಗ್ಸ್‌ನ ವ್ಯಸನಿಗಳು ಮನೆಯಲ್ಲಿ ಮತ್ತು ಸಮಾಜದಲ್ಲಿ ಹೇಗೆ ವರ್ತಿಸುತ್ತಾರೆ ಹಾಗು ಅವರಿಂದ ಉಂಟಾಗುವ ಕೌಟುಂಬಿಕ ಅಶಾಂತಿ, ಸಾವು-ನೋವುಗಳ ಅರಿವು ಮೂಡಿಸಿದ ಅವರು, ಮಾದಕ ವ್ಯಸನವು ವ್ಯಕ್ತಿ, ಕುಟುಂಬ ಮತ್ತು ಸಮಾಜದ ಮೇಲೆ ವಿನಾಶಕಾರಿ ಪರಿಣಾಮ ಬೀರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಸ್ನೇಹಿತರಲ್ಲಿ ಹಾಗು ನೆರೆಹೊರೆಯವರಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು ಎಂದರು.

ಲಯನ್ಸ್ ಸೇವಾ ಸಂಸ್ಥೆ ಅಧ್ಯಕ್ಷ ಬಿ. ಮಂಜೇಗೌಡ ಅವರು, ಮಾದಕ ವಸ್ತುಗಳ ವ್ಯಾಪಾರವು ಯುವ ಪೀಳಿಗೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇದು ವ್ಯಕ್ತಿಯ ಜೀವನವನ್ನೇ ಅಲ್ಲ, ಕುಟುಂಬ ಮತ್ತು ಸಮಾಜವನ್ನೂ ಹಾಳುಮಾಡುತ್ತದೆ. ಇತ್ತೀಚಿನ ದಿನಗಳಲ್ಲಿ ಮಾದಕ ವ್ಯಸನದಿಂದಾಗಿ ಹದಿಹರೆಯದ ಯುವತಿಯರು ಗರ್ಭಿಣಿಯರಾಗುತ್ತಿರುವುದು ಅತ್ಯಂತ ಆತಂಕಕಾರಿ ವಿಷಯ. ಯುವ ಪೀಳಿಗೆಯವರು ಇಂತಹ ದುಷ್ಟ ಪ್ರಭಾವಗಳಿಗೆ ಒಳಗಾಗದೆ ಜಾಗೃತರಾಗ ಬೇಕು. ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ ಎಂದು ಹೇಳಿದರು.

ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಎಸ್.ಮಹೇಶ್, ಶಾಲಾ ಮುಖ್ಯೋಪಾಧ್ಯಾಯ ಚಂದ್ರು, ಶಿಕ್ಷಕರಾದ ಮೋಹನ್ ಕುಮಾರ್, ಪಿ.ನಾಗಮಣಿ, ಸುಧಾ ಇತರರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK

# ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಐದು ವಿಕೆಟ್ ಜಯ

ಹೋಬಾರ್ಟ್: ವಾಷಿಂಗ್ಟನ್ ಸುಂದರ್ (ಅಜೇಯ 49) ಬಿರುಸಿನ ಆಟದ ನೆರವಿನಿಂದ ಭಾರತ ತಂಡವು ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ನಡೆದ ಮೂರನೇ ಟ್ವೆಂಟಿ-20 ಅಂತರ್‌ರಾಷ್ಟ್ರೀಯ ಪಂದ್ಯದಲ್ಲಿ ಐದು ವಿಕೆಟ್ ಅಂತರದ ಗೆಲುವು ಸಾಧಿಸಿದೆ.

ಆ ಮೂಲಕ ಐದು ಪಂದ್ಯಗಳ ಟಿ-20 ಸರಣಿಯಲ್ಲಿ 1-1ರ ಅಂತರದ ಸಮಬಲ ಸಾಧಿಸಿದೆ. ಸರಣಿಯ ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಆಸೀಸ್ ಒಡ್ಡಿದ 187 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ಇನ್ನೂ ಒಂಬತ್ತು ಎಸೆತಗಳು ಬಾಕಿ ಇರುವಂತೆಯೇ 18.3 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

ಭಾರತದ ಪರ ವಾಷಿಂಗ್ಟನ್ ಸುಂದರ್ ಕೇವಲ 23 ಎಸೆತಗಳಲ್ಲಿ 49★ ರನ್ ಗಳಿಸಿ ಅಬ್ಬರಿಸಿದರು. ವಾಷಿಂಗ್ಟನ್ ಇನಿಂಗ್ಸ್‌ನಲ್ಲಿ ನಾಲ್ಕು ಸಿಕ್ಸರ್ ಹಾಗೂ ಮೂರು ಬೌಂಡರಿಗಳು ಸೇರಿದ್ದವು. ಅಭಿಷೇಕ್ ಶರ್ಮಾ (25), ತಿಲಕ್ ವರ್ಮಾ (29) ಹಾಗೂ ನಾಯಕ ಸೂರ್ಯಕುಮಾರ್ ಯಾದವ್ (24), ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ (22★) ಸಹ ಉಪಯುಕ್ತ ಇನಿಂಗ್ಸ್ ಕಟ್ಟಿದರು.

ಈ ಮೊದಲು ಟಿಮ್ ಡೇವಿಡ್ (74) ಹಾಗೂ ಮಾರ್ಕಸ್ ಸ್ಟೋಯಿನಿಸ್ (64) ಆಕರ್ಷಕ ಅರ್ಧ ಶತಕಗಳ ನೆರವಿನಿಂದ ಆತಿಥೇಯ ಆಸ್ಟ್ರೇಲಿಯಾ ತಂಡವು, ನಿಗದಿತ 20 ಓವರ್‌ಗಳಲ್ಲಿ ಆರು ವಿಕೆಟ್ ನಷ್ಟಕ್ಕೆ 186 ರನ್‌ಗಳ ಬೃಹತ್ ಮೊತ್ತ ಪೇರಿಸಿತು.



ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಮೊದಲು ಫೀಲ್ಡಿಂಗ್ ಆಯ್ದುಕೊಂಡರು. ಭಾರತ ತಂಡದಲ್ಲಿ ಮೂರು ಬದಲಾವಣೆಗಳನ್ನು ತರಲಾಗಿತ್ತು. ಅರ್ಷದೀಪ್ ಸಿಂಗ್, ವಾಷಿಂಗ್ಟನ್ ಸುಂದರ್ ಹಾಗೂ ಜಿತೇಶ್ ಶರ್ಮಾ ಆಡುವ ಹನ್ನೊಂದರ ಬಳಗದಲ್ಲಿ ಕಾಣಿಸಿಕೊಂಡಿದ್ದಾರೆ. ಇವರಿಗಾಗಿ ಹರ್ಷಿತ್ ರಾಣಾ, ಕುಲದೀಪ್ ಯಾದವ್ ಹಾಗೂ ಸಂಜು ಸ್ಯಾಮ್ಸನ್ ಅವರನ್ನು ಕೈಬಿಡಲಾಗಿದೆ.

ಆರಂಭದಲ್ಲೇ ಟ್ರಾವಿಸ್ ಹೆಡ್ (6) ಹಾಗೂ ಜೋಶ್ ಇಂಗ್ಲಿಸ್ (1) ವಿಕೆಟ್‌ಗಳನ್ನು ಕಬಳಿಸಿದ ಅರ್ಷದೀಪ್ ಸಿಂಗ್, ಎದುರಾಳಿ ತಂಡಕ್ಕೆ ಡಬಲ್ ಆಘಾತ ನೀಡಿದರು. ಅಲ್ಲದೆ ತಂಡದಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಕಳೆದ ಪಂದ್ಯದಿಂದ ಅರ್ಷದೀಪ್ ಅವರನ್ನು ಕಡೆಗಣಿಸಲಾಗಿತ್ತು. ಈ ಮಧ್ಯೆ ನಾಯಕ ಮಿಷೆಲ್ ಮಾರ್ಷ್ (11) ಅವರೊಂದಿಗೆ ಸೇರಿದ ಟಿಮ್ ಡೇವಿಡ್ ಬಿರುಸಿನ ಆಟವಾಡುವ ಮೂಲಕ ಗಮನ ಸೆಳೆದರು.



ಆದರೆ, ಮಾರ್ಷ್ ಹಾಗೂ ಮಿಚೆಲ್ ಓವನ್ (0) ಅವರನ್ನು ಹೊರದಬ್ಬಿದ ವರುಣ್ ಚಕ್ರವರ್ತಿ ಪಂದ್ಯದಲ್ಲಿ ಭಾರತ ಹಿಡಿತ ಸಾಧಿಸುವಂತೆ ಮಾಡಿದರು. ಅತ್ತ ಆಕ್ರಮಣಕಾರಿ ಆಟವಾಡಿದ ಟಿಮ್, ಅರ್ಧಶತಕದ ಮೂಲಕ ತವರಿನ ಪ್ರೇಕ್ಷಕರನ್ನು ರಂಜಿಸಿದರು. ಅವರಿಗೆ ಕೆಳ ಕ್ರಮಾಂಕದಲ್ಲಿ ಸ್ಟೋಯಿನಿಸ್ ಅವರಿಂದ ಉತ್ತಮ ಬೆಂಬಲ ದೊರಕಿತು. ಟಿಮ್ ಡೇವಿಡ್ 38 ಎಸೆತಗಳಲ್ಲಿ ಎಂಟು ಬೌಂಡರಿ ಹಾಗೂ ಐದು ಸಿಕ್ಸರ್‌ಗಳಿಂದ 74 ರನ್ ಗಳಿಸಿದರು. ಸ್ಟೋಯಿನಿಸ್ 39 ಎಸೆತಗಳಲ್ಲಿ 64 ರನ್ ಗಳಿಸಿ (8 ಬೌಂಡರಿ, 2 ಸಿಕ್ಸರ್) ಅಬ್ಬರಿಸಿದರು. ಕೊನೆಯಲ್ಲಿ ಮಾಥ್ಯೂ ಶಾರ್ಟ್ 26★ ರನ್‌ಗಳ ಉಪಯುಕ್ತ ಇನಿಂಗ್ಸ್ ಕಟ್ಟಿದರು.

ಭಾರತದ ಪರ ಅರ್ಷದೀಪ್ ಮೂರು, ಚಕ್ರವರ್ತಿ ಎರಡು ಹಾಗೂ ಶಿವಂ ದುಬೆ ಒಂದು ವಿಕೆಟ್ ಗಳಿಸಿದರು. ಜಸ್‌ಪ್ರೀತ್ ಬೂಮ್ರಾ ನಿಖರ ದಾಳಿ ಸಂಘಟಿಸಿದರೂ (4 ಓವರ್ 26 ರನ್) ವಿಕೆಟ್ ಕಬಳಿಸಲು ಸಾಧ್ಯವಾಗಲಿಲ್ಲ.

ಟಿ-20 ಸರಣಿಯ ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿದ್ದರೆ ಎರಡನೇ ಪಂದ್ಯದಲ್ಲಿ ಭಾರತ ನಾಲ್ಕು ವಿಕೆಟ್‌ನಿಂದ ಸೋಲಿಗೆ ಶರಣಾಗಿತ್ತು.

# ಸ್ಮರಣೀಯ ದಾಖಲೆ ಬರೆದ ಸ್ಮೃತಿ ಮಂದಾನ

• ಪ್ರಜೋದಯ ವರದಿ



**ನವಿಮುಂಬೈ:** ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾನುವಾರ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುತ್ತಿರುವ ಫೈನಲ್ ಪಂದ್ಯದಲ್ಲಿ ಭಾರತದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಸ್ಮರಣೀಯ ದಾಖಲೆಯೊಂದನ್ನು ಬರೆದಿದ್ದಾರೆ.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಆವೃತ್ತಿಯೊಂದರಲ್ಲಿ ಅತಿ ಹೆಚ್ಚು ರನ್ ಗಳಿಸಿದ ಭಾರತೀಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಸ್ಮೃತಿ ಭಾಜನರಾಗಿದ್ದಾರೆ. ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಫೈನಲ್ ಪಂದ್ಯದಲ್ಲಿ ಶೆಫಾಲಿ ವರ್ಮಾ ಅವರೊಂದಿಗೆ ಮೊದಲ ವಿಕೆಟ್‌ಗೆ ಶತಕದ ಜೊತೆಯಾಟ ಕಟ್ಟಿದ ಸ್ಮೃತಿ, 45 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು.

ಇದರೊಂದಿಗೆ ಪ್ರಸಕ್ತ ಸಾಗುತ್ತಿರುವ ವಿಶ್ವಕಪ್‌ನಲ್ಲಿ ಒಂಬತ್ತು ಇನಿಂಗ್ಸ್‌ಗಳಲ್ಲಾಗಿ 54.25ರ ಸರಾಸರಿಯಲ್ಲಿ ಒಟ್ಟು 434 ರನ್ ಪೇರಿಸಿರುವ

ಸ್ಮೃತಿ, ಮಾಜಿ ನಾಯಕಿ ಮಿಥಾಲಿ ರಾಜ್ ದಾಖಲೆಯನ್ನು ಮುರಿದಿದ್ದಾರೆ. 2017ರ ವಿಶ್ವಕಪ್ ಆವೃತ್ತಿಯಲ್ಲಿ ಮಿಥಾಲಿ 45.44ರ ಸರಾಸರಿಯಲ್ಲಿ 409 ರನ್ ಗಳಿಸಿದ್ದರು. ಒಟ್ಟಾರೆಯಾಗಿ 2025ರ ಏಕದಿನ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯರ ಸಾಲಿನಲ್ಲಿ ದಕ್ಷಿಣ ಆಫ್ರಿಕಾದ ನಾಯಕಿ ಲಾರಾ ವೊಲ್ವಾರ್ಟ್ (470) ನಂತರದ ಸ್ಥಾನದಲ್ಲಿ ಸ್ಮೃತಿ ಕಾಣಿಸಿಕೊಂಡಿದ್ದಾರೆ.

**2025ರಲ್ಲಿ ಸ್ಮೃತಿ ವೈಭವ**

ಪ್ರಸಕ್ತ ಸಾಲಿನ ಏಕದಿನ ಕ್ರಿಕೆಟ್‌ನಲ್ಲಿ ರನ್ ಬೇಟೆಯಲ್ಲಿ ಅಗ್ರಸ್ಥಾನದಲ್ಲಿರುವ ಸ್ಮೃತಿ, 23 ಇನಿಂಗ್ಸ್‌ಗಳಲ್ಲಿ 61.90ರ ಸರಾಸರಿಯಲ್ಲಿ 1,362 ರನ್ ಪೇರಿಸಿದ್ದಾರೆ. ಇದರಲ್ಲಿ ಐದು ಶತಕಗಳು ಸೇರಿವೆ.

# ಬ್ಯಾಂಕ್‌ಗಳಂತೆ ಶಿಕ್ಷಣವೂ ರಾಷ್ಟ್ರೀಕರಣವಾಗಲಿ

» **ಮೊದಲನೇ ಪುಟದಿಂದ**

ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯವಾದುದು ಎಂದರು.

ಕನ್ನಡ ಸಾಹಿತ್ಯಕ್ಕೆ ಜಿಲ್ಲೆಯ ಕೊಡುಗೆ ಸಾಕಷ್ಟಿದೆ. ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಹಾಸನದವರು. ಅದೇ ರೀತಿ ವಿಶ್ವ ಮಟ್ಟದಲ್ಲಿ ಹೆಸರು ಮಾಡಿದ್ದ ಎಸ್. ಎಲ್.ಭೈರಪ್ಪ ಅವರು ನಮ್ಮ ಜಿಲ್ಲೆಯವರೇ ಎನ್ನುವುದು ಖುಷಿಯ ವಿಚಾರ. ಎಲೆಮರೆ ಕಾಯಿಯಂತಿರುವ ಲೇಖಕರನ್ನು ಗುರುತಿಸಿ ಅವರಿಗೆ ವೇದಿಕೆ ಕಲ್ಪಿಸುವ ಕೆಲಸವನ್ನು ಮಾಣಿಕ್ಯ ಪ್ರಕಾಶನ ಹಾಗು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕವಿಕಾವ್ಯ ಸಂಭ್ರಮದ ಸರ್ವಾಧ್ಯಕ್ಷೆ ವಾಣಿಶೆಟ್ಟಿ ಅವರು ಮಾತನಾಡಿ, ಸಾಮರಸ್ಯದ ಬದುಕಿಗೆ ಪುಸ್ತಕ ಓದಬೇಕು. ಸಾಮಾಜಿಕ ಸಾಮರಸ್ಯದಿಂದ ಮನುಷ್ಯ ಉನ್ನತ ಮಟ್ಟಕ್ಕೆ ಏರುತ್ತಾನೆ. ಶಾಲಾ ದಿನಗಳಿಂದಲೇ ಸಾಹಿತ್ಯದತ್ತ ಆಸಕ್ತಿ ಬೆಳೆಸಿಕೊಂಡರೆ ಅಂತಹವರು ನೆಮ್ಮದಿ ಬದುಕು ಕಟ್ಟಿಕೊಳ್ಳಬಹುದೆಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾ ಗೌರವಾಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ಮಾಣಿಕ್ಯ ಪ್ರಕಾಶನ ನಡೆಸುವ ಕಾರ್ಯಕ್ರಮಗಳು ಅಚ್ಚುಕಟ್ಟಾಗಿರುತ್ತವೆ. ಲೇಖಕರನ್ನು ಗುರುತಿಸಿ ಬೆಳೆಸುವ ಪರಿ ಮೆಚ್ಚುವಂತಹುದು. ಇಂತಹ ಕಾರ್ಯಕ್ರಮಗಳು ಹೆಚ್ಚಾಗಲಿ ಎಂದು ಆಶಿಸಿದರು.

ಲೇಖಕರಾದ ವಿಶ್ವೇಶ್ವರ್ ಮೇಟಿ, ಸತೀಶ್ ಜವರೇಗೌಡ, ನಾಗರಾಜ್ ಹೆತ್ತೂರು ಮಾತನಾಡಿದರು. ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಕಾಶಕಿ ದೀಪಾ ಉಪ್ಪಾರ್, ನಾಗರಾಜ್ ದೊಡ್ಡಮನಿ, ಬಸವರಾಜ್ ಇತರರಿದ್ದರು.

**ಹೊಯ್ಸಳ ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ**

ಹಾಸನದ ಜಿ.ಪ್ರಕಾಶ್, ಕೊಡಗು ಜಿಲ್ಲೆಯ ಡಾ.ರಘು ಕೋಟಿ, ಮೈಸೂರಿನ ಡಾ.ಹೆಚ್.ಎಲ್. ಶಿವಬಸಪ್ಪ, ಅರಸೀಕೆರೆಯ ಕೆ.ಎಸ್. ಮಂಜುನಾಥ್ ಹಾಗು ವೈ.ಎಸ್. ರಮೇಶ್ ಅವರಿಗೆ ಹೊಯ್ಸಳ ಸಾಂಸ್ಕೃತಿಕ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಂತರ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು.

## ಪಾರದರ್ಶಕ ಚುನಾವಣೆಗೆ ಒತ್ತು: ಜ್ಞಾನೇಶ್ ಕುಮಾರ್



• ಪ್ರಜೋದಯ ವರದಿ

**ಕಾನ್ಪುರ:** ಬಿಹಾರ ವಿಧಾನಸಭಾ ಚುನಾವಣೆಯು ಕಾನೂನು ಸುವ್ಯವಸ್ಥೆಯ ಚೌಕಟ್ಟಿನಲ್ಲಿ ಶಾಂತಿಯುತ ಹಾಗು ಪಾರದರ್ಶಕವಾಗಿ ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಭಾನುವಾರ ತಿಳಿಸಿದ್ದಾರೆ.

ಎಲ್ಲಾ ಮತದಾರರಿಗೂ ಪ್ರಜಾ ಪ್ರಭುತ್ವದ ಹಬ್ಬದಲ್ಲಿ ಭಾಗವಹಿಸುವ ಅವಕಾಶವಿದೆ. ಮತದಾನವು ಕಾನೂನಿನ ಚೌಕಟ್ಟಿನಲ್ಲಿ ನಡೆಯಲಿದೆ. ಈ ವೇಳೆ ಅಶಾಂತಿ, ಗಲಭೆಗಳನ್ನು ಚುನಾವಣಾ ಆಯೋಗವು ತೀವ್ರವಾಗಿ ವಿರೋಧಿಸುತ್ತದೆ ಎಂದು ಹೇಳಿದ್ದಾರೆ.

ಎಲ್ಲಾ ಮತದಾರರು ತಮ್ಮ ಕರ್ತವ್ಯವನ್ನು ನಿಬಾಯಿಸುವ ವಿಶ್ವಾಸ ಇದೆ. ಮತದಾರರು ಸ್ವಯಂ ಪ್ರೇರಿತರಾಗಿ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗವಹಿಸಬೇಕೆಂದು ಅವರು ಮನವಿ ಮಾಡಿದ್ದಾರೆ. 243 ಸದಸ್ಯ ಬಲದ ಬಿಹಾರದಲ್ಲಿ ನ. 6 ಹಾಗು 11ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ನ.14ರಂದು ಫಲಿತಾಂಶ ಪ್ರಕಟವಾಗಲಿದೆ.

# ರಾಜ್ಯದಲ್ಲಿ ನವೆಂಬರ್ ರಾಜಕೀಯ ಕ್ರಾಂತಿ, ಸಚಿವ ಸತೀಶ್ ಜಾರಕಿಹೊಳಿ ದೆಹಲಿಗೆ

• ಪ್ರಜೋದಯ ವರದಿ

**ಬೆಂಗಳೂರು :** ರಾಜಕೀಯವಾಗಿ ನವೆಂಬರ್ ಕ್ರಾಂತಿಯ ಚರ್ಚೆಗಳ ನಡುವೆ ಸಚಿವ ಸಂಪುಟದ ಪ್ರಭಾವಿ ಸಚಿವರ ದೆಹಲಿ ಯಾತ್ರೆಗಳು ಮತ್ತಷ್ಟು ಹೆಚ್ಚಾಗಿವೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಿ ವರಿಷ್ಠರ ಆಪ್ತರನ್ನು ಭೇಟಿ ಮಾಡಿ ವಾಪಸ್ಸಾದ ಬೆನ್ನಲ್ಲೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕೂಡ ದೆಹಲಿಯತ್ತ ಮುಖ ಮಾಡಿದ್ದಾರೆ.

ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಸೋನಿಯಾ ಗಾಂಧಿಯವರ ಆಪ್ತರಾದ ಅಂಬಿಕಾ ಸೋನಿ ಅವರನ್ನು ಭೇಟಿ ಮಾಡಿದ್ದರು. ಜೊತೆಗೆ ಕೆಲವು ಹಿರಿಯ ನಾಯಕರ ಜೊತೆಯೂ ಮಾತುಕತೆ ನಡೆಸಿದ್ದರು. ನವೆಂಬರ್ ಕ್ರಾಂತಿಯ ವಿಚಾರವಾಗಿ ನಾನಾ ರೀತಿಯ ವದಂತಿಗಳು ಹಬ್ಬುತ್ತಿವೆ. ಡಿ.ಕೆ. ಶಿವಕುಮಾರ್ ಅವರ ಮೌನ ತಂತ್ರಗಾರಿಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಣದಲ್ಲಿ ಕಳವಳ ಸೃಷ್ಟಿಸಿದೆ. ಹೀಗಾಗಿ ಸಿದ್ದರಾಮಯ್ಯನವರ ಆಪ್ತರಾಗಿರುವ ಸಚಿವ ಸತೀಶ್ ಜಾರಕಿಹೊಳಿ ಮೂರು ದಿನ ದೆಹಲಿಯಲ್ಲಿ ಬೀಡುಬಿಟ್ಟು ತಮದೇ ಕಾರ್ಯತಂತ್ರ ಬಳಸಲಿದ್ದಾರೆಂಬ ಚರ್ಚೆ ನಡೆದಿವೆ.

ಅಧಿಕಾರ ಹಂಚಿಕೆ ಸೇರಿ ಯಾವುದೇ ರಾಜಕೀಯ ವಿಚಾರಗಳಾದರೂ ಸಿದ್ದರಾಮಯ್ಯ ನೇರವಾಗಿ ಅಖಾಡ ಪ್ರವೇಶ ಮಾಡುವುದಿಲ್ಲ. ಬದಲಾಗಿ ತಮ ಆಪ್ತರನ್ನು ಮೊದಲು ಬಿಟ್ಟು ಪೂರಕ ವೇದಿಕೆ ಸೃಷ್ಟಿಸಿಕೊಳ್ಳುವ ತಾಂತ್ರಿಕತೆಯನ್ನು ಅನುಸರಿಸುತ್ತಿದ್ದಾರೆ. ಈಗಲೂ ಸಿದ್ದರಾಮಯ್ಯ ಅದೇ ಮಾದರಿಯ ರಾಜಕಾರಣ ಮಾಡುತ್ತಿದ್ದಾರೆಯೇ ಎಂಬ ಅನುಮಾನಗಳು ಕಾಡಲಾರಂಭಿಸಿವೆ.

ಡಿ.ಕೆ.ಶಿವಕುಮಾರ್ ರಾಜ್ಯದ ಯಾವ ನಾಯಕರನ್ನು ನಂಬಿಕೊಳ್ಳದೆ ನೇರವಾಗಿ ದೆಹಲಿಯ ವರಿಷ್ಠರ ಜೊತೆ ಸಂಪರ್ಕದಲ್ಲಿದ್ದಾರೆ. ರಾಜ್ಯದಲ್ಲಿ ನೂರು ಕಾಂಗ್ರೆಸ್ ಕಚೇರಿಗಳ ನಿರ್ಮಾಣ ಯೋಜನೆಯ ಉದ್ಘಾಟನೆಗೆ ಡಿ.ಕೆ.ಶಿವಕುಮಾರ್ ವರಿಷ್ಠರ ಪೈಕಿ ರಾಹುಲ್ ಗಾಂಧಿ ಜೊತೆಗೆ, ಸೋನಿಯಾ ಗಾಂಧಿಯವರನ್ನು ಆಹ್ವಾನಿಸಲು ಪ್ರಯತ್ನಿಸುತ್ತಿದ್ದಾರೆ. ಆ ಕಾರಣಕ್ಕೆ ಸೋನಿಯಾ ಗಾಂಧಿಯವರ ಜೊತೆ ಚರ್ಚೆ ಮಾಡಿದ್ದರು ಎಂಬ ಸ್ಪಷ್ಟನೆಗಳು ಕೇಳಿಬರುತ್ತಿವೆ. ಆದರೆ ಇದನ್ನು ಸಿದ್ದರಾಮಯ್ಯ ಅವರ ಬಣ ನಂಬುತ್ತಿಲ್ಲ.

ಸತೀಶ್ ಜಾರಕಿಹೊಳಿ ಅವರು ತಮ ಇಲಾಖೆಯ ಕಾರ್ಯ ಯೋಜನೆಗಳ ಸಂಬಂಧಪಟ್ಟಂತೆ ಚರ್ಚಿಸಲು ದೆಹಲಿಗೆ ತೆರಳುತ್ತಿದ್ದಾರೆಂದು ಹೇಳುತ್ತಲೇ ತೆರೆಮರೆಯಲ್ಲಿ ಮತ್ತೊಂದು ತಂತ್ರಗಾರಿಕೆ ಅನುಸರಿಸಲಾಗುತ್ತಿದೆ. ರಾಜ್ಯದಲ್ಲಿ ನಡೆಯುತ್ತಿರುವ ಗೊಂದಲಗಳ ಬಗ್ಗೆ ಹೈಕಮಾಂಡ್‌ಗೆ ವರದಿ ನೀಡುವ ಮೂಲಕ ಎಲ್ಲಾ ಗೊಂದಲಗಳನ್ನು ಬಗೆಹರಿಸಿ, ಸತೀಶ್ ಜಾರಕಿಹೊಳಿ ಮನವಿ ಮಾಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಅಧಿಕಾರ ಹಂಚಿಕೆಗೆ ದೆಹಲಿಯಲ್ಲಿ ಒಪ್ಪಂದವಾಗಿದೆ. ನವೆಂಬರ್ 20ಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಎರಡೂವರೆ ವರ್ಷಗಳಾಗುತ್ತವೆ. ಸಿದ್ದರಾಮಯ್ಯ ತಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಉಳಿದ ಅವಧಿಗೆ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಕೊಡಲಿದ್ದಾರೆ. ಈ ರೀತಿಯೇ ನಡೆಯಬೇಕೆಂಬ ಒತ್ತಾಯಗಳು ಕೂಡ ಇದೆ. ಈ ವಿಷಯವಾಗೇ ನಾನಾ ರೀತಿಯ ಚರ್ಚೆಗಳು ನಡೆಯುತ್ತಿವೆ.

ಸಿದ್ದರಾಮಯ್ಯ ಅವರನ್ನು ಪದಚ್ಯುತಗೊಳಿಸಬಾರದು, ಅವರ ಪರವಾಗಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ದೊಡ್ಡ ಮತ ಬ್ಯಾಂಕ್ ಇದೆ. ಹೀಗಾಗಿ ಪ್ರಸ್ತುತ ಇರುವ ವ್ಯವಸ್ಥೆಯನ್ನೇ ಮುಂದುವರಿಸಬೇಕು ಎಂದು ಸತೀಶ್ ಜಾರಕಿಹೊಳಿ ದೆಹಲಿಯ ವರಿಷ್ಠರ ಮುಂದೆ ಪ್ರತಿಪಾದಿಸುವ ಸಾಧ್ಯತೆ ಇದೆ.

ಸತೀಶ್ ಜಾರಕಿಹೊಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿಗೆ ಸಮಯ ಕೇಳಿದ್ದು, ಅದಕ್ಕೆ ಎಐಸಿಸಿ ಅಧ್ಯಕ್ಷರ ಕಚೇರಿಯಿಂದಲೂ ಸಕಾರಾತಕ ಸ್ಪಂದನೆ ಸಿಕ್ಕಿರುವುದು ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ. ಸತೀಶ್ ಜಾರಕಿಹೊಳಿ ಬಳಿಕ ಮಾಜಿ ಸಚಿವ ಕೆ.ಎನ್.ರಾಜಣ್ಣ ಸೇರಿ ಸಿದ್ದರಾಮಯ್ಯ ಬಣದ ಹಲವು ನಾಯಕರು ದೆಹಲಿಗೆ ತೆರಳಲು ಮುಂದಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ನವಂಬರ್ ತಿಂಗಳ ಕ್ರಾಂತಿಗೆ ಇನ್ನೂ 20 ದಿನಗಳಿವೆ. ಅದಕ್ಕೂ ಮುನ್ನವೇ ಕಾಂಗ್ರೆಸ್‌ನಲ್ಲಿ ಭಾರೀ ಸಂಚಲನ ಸೃಷ್ಟಿಯಾಗಿವೆ. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಬಣಗಳ ನಡುವೆ ವಾದ-ಪ್ರತಿವಾದ ಹೆಚ್ಚಾಗಿವೆ. ಪರಸ್ಪರ ಸಮರ್ಥನೆಗಳು ಕಂಡು ಬರುತ್ತಿವೆ. ಎಲ್ಲಾ ಗೊಂದಲಗಳಿಗೆ ಹೈಕಮಾಂಡ್ ಸ್ಪಷ್ಟ ಸಂದೇಶ ರವಾನಿಸಬೇಕು ಎಂಬ ಒತ್ತಡಗಳಿವೆ.

## ಸತೀಶ್ ದೆಹಲಿ ಭೇಟಿ ತಪ್ಪಾಗಿ ಅರ್ಥೈಸುವುದು ಬೇಡ :ಡಿ.ಕೆ.ಶಿ.

» **ಮೊದಲನೇ ಪುಟದಿಂದ**

ಯಾರು ಬೇಕಾದರೂ ದೆಹಲಿಗೆ ಹೋಗಲಿ. ನನಗೂ ನವೆಂಬರ್ 5 ಅಥವಾ 7ರಂದು ಬಿಹಾರದ ವಿಧಾನಸಭಾ ಚುನಾವಣೆಗೆ ಹೋಗಬೇಕಿದೆ. ಈ ಮಧ್ಯೆ ದೆಹಲಿಯಲ್ಲಿ ಕೇಂದ್ರ ಸಚಿವರು ಸಭೆ ಕರೆದಿದ್ದಾರೆ. ಜೊತೆಗೆ ಕಾವೇರಿ ವಿವಾದ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದೆ. ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ಮಾಹಿತಿಗಳನ್ನು ತಾವು ಪಡೆದುಕೊಂಡಿದ್ದು, ದೆಹಲಿಯಲ್ಲಿ ವಕೀಲರ ಜೊತೆ ಚರ್ಚಿಸಬೇಕಿದೆ. ತಮಿಳುನಾಡಿನ ತಕರಾರು ಮತ್ತು ನಮ ಮನವಿಗಳ ವಿವರ ನೀಡಬೇಕಿದೆ ಎಂದರು.

ಕೆಲವು ಸಂದರ್ಭಗಳಲ್ಲಿ ಬೇರೆ ಬೇರೆ ರಾಜ್ಯಗಳ ಪಕ್ಷ ಸಂಘಟನೆ ಹಾಗೂ ಚುನಾವಣಾ ಉಸ್ತುವಾರಿಗೆ ರಾಜ್ಯದ ಶಾಸಕರನ್ನು ನಿಯೋಜಿಸಲಾಗಿರುತ್ತದೆ. ನಮ ರಾಜ್ಯದ ಶಾಸಕರಾದ ರಿಜ್ವಾನ್ ಅರ್ಷದ್, ಶ್ರೀನಿವಾಸ್ ಮಾನೆ, ಸಂಸದರಾದ ಶ್ರೇಯಸ್ ಪಟೇಲ್, ಇ. ತುಕಾರಾಂ ಸೇರಿ ಅನೇಕರಿಗೆ ಒರಿಸ್ಸಾದ ಉಸ್ತುವಾರಿ ಹಾಕಲಾಗಿತ್ತು. ನಮ ರಾಜ್ಯಕ್ಕೂ ಇದೇ ರೀತಿ ಅನೇಕ ನಾಯಕರು ಆಗಮಿಸುತ್ತಿರುತ್ತಾರೆ ಂದು ಅವರು ಹೇಳಿದರು.

## ಹೆತ್ತ ತಾಯಿ ಮೃತದೇಹ ಬೇಡ ಕಿವಿಯೊಲೆ ಸಾಕು

» **ಮೊದಲನೇ ಪುಟದಿಂದ**

ಆ ಬಳಿಕ ಇಂದ್ರಮ್ಮ ತಮ್ಮ ಸಂಬಂಧಿಕರೊಂದಿಗೆ ಅಲ್ಲಿಗೆ ಬಂದಿದ್ದಾರೆ. ಆಶ್ರಮದ ಸಿಬ್ಬಂದಿ ಆ್ಯಂಬುಲೆನ್ಸ್‌ನಲ್ಲಿ ಮೃತದೇಹ ತೆಗೆದುಕೊಂಡು ಹೋಗುವಂತೆ ಸೂಚಿಸಿದಾಗ ಇಬ್ಬರು ಮಕ್ಕಳ ನಡುವೆ ಗಲಾಟೆ ಶುರುವಾಗಿದೆ. ತಾಯಿ ಕಿವಿಯಲ್ಲಿರುವ ಕಿವಿಯೊಲೆ ಹಾಗು ಆಧಾರ್ ಕಾರ್ಡ್ ಮಾತ್ರ ಕೊಡಿ ಶವ ನಮಗೆ ಬೇಡವೆಂದು ತಗಾದೆ ತೆಗೆದಿದ್ದಾರೆ. ಬ್ಯಾಂಕ್ ಖಾತೆಯಲ್ಲಿ ಹಣವಿದ್ದು, ಅದನ್ನು ಪಡೆಯಲು ಆಧಾರ್ ಕಾರ್ಡ್ ಬೇಕೆಂದು ಒಬ್ಬ ಹೇಳಿದರೆ ಮತ್ತೊಬ್ಬ ಕಿವಿಯೊಲೆ ತನಗೆ ಬೇಕೆಂದು ವಾಗ್ವಾದ ನಡೆಸಿದ. ಈ ವಿಚಾರವಾಗಿ ಸಹೋದರರ ನಡುವೆ ಗಲಾಟೆ ಶುರುವಾಗಿ ಪರಸ್ಪರ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಹೊಡೆದಾಡಿಕೊಂಡರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾದ್ದರಿಂದ ವೃದ್ಧಾಶ್ರಮದ ಸಿಬ್ಬಂದಿ ಇಬ್ಬರನ್ನೂ ಸಮಾಧಾನಪಡಿಸಿದರು. ಸಂಪ್ರದಾಯದಂತೆ ಅಂತ್ಯ ಸಂಸ್ಕಾರ ನೆರವೇರಿಸಿ ಬಳಿಕ ಸಮಸ್ಯೆ ಬಗೆಹರಿಸಿಕೊಳ್ಳಿರಿ ಎಂದು ಎಷ್ಟೇ ಹೇಳಿದರೂ ಪುತ್ರರು ಕೇಳಲಿಲ್ಲ.

ಈ ವೇಳೆ ಮುಂದೆ ಬಂದ ಪುತ್ರಿ ಇಂದ್ರಮ್ಮ ಅವರು ಮೃತದೇಹ ಅಂತ್ಯಕ್ರಿಯೆ ನಾನೇ ಮಾಡುತ್ತೇನೆಂದು ಬಿಕ್ಕಿ ಬಿಕ್ಕಿ ಅತ್ತರು. ಅದಕ್ಕೆ ಇಬ್ಬರೂ ಮಕ್ಕಳು ಮಾತನಾಡದೆ ಸುಮ್ಮನೆ ನಿಂತಿದ್ದರಿಂದ ಪಾರ್ವತಮ್ಮ ಅವರ ಕಿವಿಯೊಲೆ ಹಾಗು ಆಧಾರ್ ಕಾರ್ಡ್ ಅನ್ನು ಮಗಳ ಸುಪರ್ದಿಗೆ ಕೊಟ್ಟು ಕಳುಹಿಸಲಾಯಿತು.

**ಆಸ್ತಿ ಬರೆಸಿಕೊಂಡ ಕೈ ಬಿಟ್ಟ ಮಕ್ಕಳು**

ಪತಿ ಹಲಗೇಗೌಡ ಅವರ ನಿಧನದ ಬಳಿಕ ಪಾರ್ವತಮ್ಮ ಅಕ್ಷರಶ: ಬೀದಿಗೆ ಬಿದ್ದಿದ್ದರು. ಇದ್ದ ಎರಡು ಎಕರೆ ಜಮೀನನ್ನು ತಂದೆಯ ನಿಧನದ ಬಳಿಕ ಮೂವರು ಮಕ್ಕಳು ತಮ್ಮ ಹೆಸರಿಗೆ ಬರೆಸಿಕೊಂಡಿದ್ದರು. ಆಸ್ತಿ ತಮ್ಮ ಸುಪರ್ದಿಗೆ ಬಂದ ಬಳಿಕ ತಾಯಿಯನ್ನು ಸಂಪೂರ್ಣ ನಿರ್ಲಕ್ಷಿಸಿದ್ದರು. ಸೊಸೆಯಂದಿರು ಪ್ರೀತಿ ತೋರದ ಹಿನ್ನಲೆಯಲ್ಲಿ ಪಾರ್ವತಮ್ಮ ಕಳೆದ 14 ವರ್ಷಗಳಿಂದ ಮಗಳ ಮನೆಯಲ್ಲಿದ್ದರು. ಇತ್ತೀಚೆಗೆ ಅಲ್ಲಿಯೂ ಇರಲು ಸಾಧ್ಯವಾಗದೆ ಊರೂರು ಅಲೆಯುತ್ತಾ ಹೊತ್ತು ಕಳೆಯುತ್ತಿದ್ದರು. ಚನ್ನರಾಯಪಟ್ಟಣದ ಮಾತೃಭೂಮಿ ವೃದ್ಧಾಶ್ರಮ ಸೇರಿದ 11 ದಿನಕ್ಕೆ ಅವರು ನಿಧನರಾಗಿದ್ದಾರೆ.

## ಶೆಟ್ಟಿಹಳ್ಳಮ್ಮ ದೇವಾಲಯದಲ್ಲಿ ಕಳವು


• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದೇವತೆ ಶ್ರೀ ಶೆಟ್ಟಿಹಳ್ಳಮ್ಮ ದೇಗುಲದ ಬೀಗ ಒಡೆದು ಖದೀಮರು ಕಳ್ಳತನ ನಡೆಸಿದ್ದು, ಕೃತ್ಯದ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಭಾನುವಾರ ಬೆಳಗಿನ ಜಾವ ಸುಮಾರಿನಲ್ಲಿ ಕಬ್ಬಿಣದ ರಾಡಿನಿಂದ ಮುಖ್ಯ ಬಾಗಿಲಿನ ಬೀಗ ಒಡೆದು ಒಳನುಗ್ಗಿರುವ ಖದೀಮರು ಇತರೆ ಸಲಕರಣೆಗಳಿಂದ ಹುಂಡಿ ಒಡೆದು ಹಣ ದೋಚಿದ್ದಾರೆ. ಶೂ ಹಾಗೂ ಚಪ್ಪಲಿಗಳನ್ನು ಹಾಕಿಕೊಂಡೆ ಗರ್ಭಗುಡಿಗೂ ಪ್ರವೇಶಿಸಿರುವ ಖದೀಮರು ಮೂರ್ತಿಯಲ್ಲಿ ಒಡವೆಗಳಿಗಾಗಿ ಹುಡುಕಾಟ ನಡೆಸಿರುವುದು ಕಂಡುಬಂದಿದೆ.

ಕೆಲ ತಿಂಗಳ ಹಿಂದೆ ಕಳ್ಳನೊಬ್ಬ ದೇಗುಲ ನುಗ್ಗಲು ಯತ್ನಿಸಿ ಗ್ರಾಮಸ್ಥರ ಕೈಗೆ ಸಿಕ್ಕಿಕೊಂಡಿದ್ದ. ಹಾಗಾಗ್ಗೆ ಕಳ್ಳತನ ಆಗುವುದನ್ನು ಮನಗಂಡ ಗ್ರಾಮಸ್ಥರು ಇತ್ತೀಚಿಗೆ ಸಿಸಿ ಕ್ಯಾಮೆರಾ ಅಳವಡಿಸಿದ್ದರು. ದೇಗುಲವು ಏಳು ಗ್ರಾಮಗಳ ಬುಡಕಟ್ಟಿಗೆ ಸೇರಿದ್ದು, ಹೊರ ಜಿಲ್ಲೆಗಳಿಂದಲೂ ಕೂಡ ಭಕ್ತರು ಆಗಮಿಸುವುದು ವಿಶೇಷವಾಗಿದೆ. ಪ್ರತಿದಿನ ಪೂಜಾ ಕೈಂಕರ್ಯಗಳು ನಡೆಯಲಿದ್ದು ನೂರಾರು ಭಕ್ತರು ಆಗಮಿಸುತ್ತಾರೆ.

ಇದರಿಂದ ಹುಂಡಿಯಲ್ಲಿ ಹೆಚ್ಚಿನ ಹಣ ಸಂಗ್ರಹವಾಗಿರಬಹುದೆಂದು ತಿಳಿದ ಖದೀಮರು ಕಳ್ಳತನ ಮಾಡಿದ್ದಾರೆಂದು ಗ್ರಾಮಸ್ಥರು ದೂರಿದರು. ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ತನಿಖೆ ಕೈಗೊಂಡಿದ್ದಾರೆ.





ಸಕಲೇಶಪುರದ ಇ.ಎಚ್. ಯಂಗ್ಸ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ 200809ನೇ ಸಾಲಿನ ಹಳೆ ವಿದ್ಯಾರ್ಥಿಗಳು ಭಾನುವಾರ ಇದೇ ಕಾಲೇಜಿನಲ್ಲಿ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಆ ವರ್ಷದಲ್ಲಿ ಇದ್ದ ಉಪನ್ಯಾಸಕರಾದ ದೇವರಾಜೇಗೌಡ, ಮನೋಹರ್, ಸುಜಯಾ, ಜಯದೇವಯ್ಯ, ಗೋಪಾಲ, ಪ್ರಾಣೇಶ್ ಅವರನ್ನು ಗೌರವಿಸಲಾಯಿತು

## ವ್ಯಕ್ತಿ ಆತ್ಮಹತ್ಯೆ

**ಆಲೂರು:** ಪಾಳ್ಯ ಹೋಬಳಿ ಹಳುವಳ್ಳಿ ಗ್ರಾಮದ ಸಂದೀಪಗೌಡ (28) ನೇಣಿಗೆ ಶರಣಾದ ಘಟನೆ ಭಾನುವಾರ ಸಂಭವಿಸಿದೆ.

ಕಣತೂರು ಗ್ರಾಮದಲ್ಲಿ ದಿನಸಿ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ ಆತ ಒಂಟಿಯಾಗಿ ವಾಸ ಮಾಡುತ್ತಿದ್ದ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಮೃತನ ಪೋಷಕರು ನಿಧನ ಹೊಂದಿದ್ದಾರೆ. ಇಬ್ಬರು ಸಹೋದರಿಯರು ವಿವಾಹವಾಗಿದ್ದು, ಸ್ಥಳಕ್ಕೆ ಬಂದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಪೊಲೀಸ್ ಮೂಲಗಳು ತಿಳಿಸಿವೆ.

## ಸಿಎಂಎಸ್-03 ಉಪಗ್ರಹ ಯಶಸ್ವಿ ಉಡಾವಣೆ

• ಪ್ರಜೋದಯ ವರದಿ



**ಬೆಂಗಳೂರು :** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ () ಮತ್ತೊಮ್ಮೆ ಇತಿಹಾಸ ಸೃಷ್ಟಿಸಿದೆ. ತನ್ನ ಭಾರವಾದ ರಾಕೆಟ್ ಎಲ್‌ವಿಎಂ 3-ಎಂ 5 ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆಯಾಯಿತು.

ಸಿಎಂಎಸ್-03 ಸಂವಹನ ಉಪಗ್ರಹವನ್ನು ಹೊತ್ತ ರಾಕೆಟ್ ಬಾಹ್ಯಾಕಾಶಕ್ಕೆ ಹಾರಿತು. ಈ ಉಡಾವಣೆಯು ಭಾರತದ ಸಂವಹನ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಸಾಮರ್ಥ್ಯಗಳಲ್ಲಿ ಮಹತ್ತರ ಸಾಧನೆಯಾಗಲಿದೆ. ಈ ಕಾರ್ಯಾಚರಣೆಯು ದೇಶದ ಡಿಜಿಟಲ್ ನೆಟ್‌ವರ್ಕ್ ಅನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಉಡಾವಣೆಯ ಸಮಯದಲ್ಲಿ ರಾಕೆಟ್ ತನ್ನ 200 ಘನ ಬೂಸ್ಟರ್‌ಗಳು ಮತ್ತು ಪೇಲೋಡ್ ಫೇರಿಂಗ್ ಎರಡನ್ನೂ ಯಶಸ್ವಿಯಾಗಿ ಬೇರ್ಪಡಿಸಿತು. ನಂತರ ಅದು 110 ಲಿಕ್ವಿಡ್ ಕೋರ್ ಹಂತವನ್ನು ಮತ್ತು ನಂತರ ಅದರ ಅಂತಿಮ ಹಂತವಾದ 25 ಕ್ರಯೋಜೆನಿಕ್ ಹಂತವನ್ನು ಪ್ರವೇಶಿಸಿತು. ಈ ಸಂಪೂರ್ಣ ಕಾರ್ಯಾಚರಣೆಯು ನಿಖರವಾಗಿ ಯೋಜಿಸಿದಂತೆ ನಡೆಯಿತು. ಇಸ್ರೋದ ತಾಂತ್ರಿಕ ನಿಖರತೆ ಮತ್ತು ಅದರ ವಿಜ್ಞಾನಿಗಳ ಕಠಿಣ ಪರಿಶ್ರಮವನ್ನು ಪ್ರದರ್ಶಿಸಿತು.

## ವರ್ಗಾವಣೆಯಾದ ಶಿಕ್ಷಕರಿಗೆ ಬೀಳ್ಕೊಡುಗೆ



• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿಯ ಕೇಶವನಗರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ವರ್ಗಾವಣೆಯಾದ ಶಿಕ್ಷಕರಿಗೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಸನ್ಮಾನ ಸ್ವೀಕರಿಸಿ ಶಿಕ್ಷಕ ಕುಮಾರ್ ಅವರು ಮಾತನಾಡಿ, ಕಳೆದ ಹದಿನೈದು ವರ್ಷಗಳಿಂದ ಈ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದು ತೃಪ್ತಿ ತಂದಿದೆ. ಅರೇಹಳ್ಳಿ ಪಟ್ಟಣದಲ್ಲಿ ಶಾಲೆಗಳ ಸಂಖ್ಯೆ ಹೆಚ್ಚಿದ್ದರೂ ಸಿಗುವ ಮೂಲ ಸೌಲಭ್ಯಗಳನ್ನು ಬಳಸಿಕೊಂಡು ಮಕ್ಕಳ ಸಂಖ್ಯೆ ಹೆಚ್ಚಿಸಲು ವಿಭಿನ್ನವಾಗಿ ಪ್ರಯತ್ನಿಸಲಾಗಿದೆ. ನಿಸ್ವಾರ್ಥ ಸೇವೆ ಸಲ್ಲಿಸಲು ಕಾರಣಕರ್ತರಾದ ಮುಖ್ಯ ಶಿಕ್ಷಕರಿಗೆ, ಎಸ್‌ಡಿಎಂಸಿ ಪದಾಧಿಕಾರಿಗಳಿಗೆ, ಪೋಷಕರಿಗೆ ಹಾಗು ಸಹ ಶಿಕ್ಷಕರಿಗೆ ಧನ್ಯವಾದ ಸಲ್ಲಿಸುತ್ತೇನೆಂದರು.

ಮುಖ್ಯ ಶಿಕ್ಷಕ ಕಾಂತರಾಜ್ ಅವರು ಮಾತನಾಡಿ, 15 ವರ್ಷಗಳಿಂದ ಶಿಕ್ಷಕರಾಗಿ ಸೇವೆ ಸಲ್ಲಿಸಿ ಬೇರೆ ಶಾಲೆಗೆ ವರ್ಗಾವಣೆಗೊಂಡಿರುವುದು ಬೇಸರ ತಂದಿದೆ ಎಂದರು. ಸಿಆರ್‌ಪಿ ಶೈಲಜಾ, ಮುಖ್ಯ ಶಿಕ್ಷಕ ರಾಜಶೇಖರ್, ಮಂಜಪ್ಪ, ಕುಮಾರ್, ಶಿವಾನಂದ್ ಇನ್ನಿತರರು ಇದ್ದರು.

## ಮಹಿಳಾ ವಿಶ್ವಕಪ್ ಫೈನಲ್ | ದ.ಆಫ್ರಿಕಾಕ್ಕೆ 299ರನ್ ಗುರಿ

# ಶಫಾಲಿ, ದೀಪ್ತಿ ಭರ್ಜರಿ ಅರ್ಧ ಶತಕ

• ಪ್ರಜೋದಯ ವರದಿ

**ನವಿ ಮುಂಬೈ:** ಶಫಾಲಿ ವರ್ಮಾ (87) ಹಾಗೂ ದೀಪ್ತಿ ಶರ್ಮಾ (58) ಆಕರ್ಷಕ ಅರ್ಧ ಶತಕಗಳ ನೆರವಿನಿಂದ ಭಾರತ ತಂಡವು ಇಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುತ್ತಿರುವ ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ 2025ರ ಟೂರ್ನಿಯ ಫೈನಲ್ ಪಂದ್ಯದಲ್ಲಿ ನಿಗದಿತ 50 ಓವರ್‌ಗಳಲ್ಲಿ ಏಳು ವಿಕೆಟ್ ನಷ್ಟಕ್ಕೆ 298 ರನ್‌ಗಳ ಸವಾಲಿನ ಮೊತ್ತ ಪೇರಿಸಿದೆ.

ಮಳೆಯಿಂದಾಗಿ ಪಂದ್ಯ ಎರಡು ತಾಸುಗಳಷ್ಟು ವಿಳಂಬವಾಗಿ ಆರಂಭವಾಯಿತು. ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಆಹ್ವಾನಿಸಲ್ಪಟ್ಟ ಆತಿಥೇಯರಿಗೆ ಸ್ಮೃತಿ ಮಂದಾನ ಹಾಗೂ ಶಫಾಲಿ ವರ್ಮಾ ಉತ್ತಮ ಆರಂಭವೊದಗಿಸಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 17.4 ಓವರ್‌ಗಳಲ್ಲಿ ಶತಕದ (104) ಜೊತೆಯಾಟ ಕಟ್ಟಿದರು.



ಮಗದೊಮ್ಮೆ ಗಮನಾರ್ಹ ಇನಿಂಗ್ಸ್ ಕಟ್ಟಿದ ಸ್ಮೃತಿ 58 ಎಸೆತಗಳಲ್ಲಿ 45 ರನ್ (8 ಬೌಂಡರಿ) ಗಳಿಸಿದರು. ಅತ್ತ ನಾಕೌಟ್ ಹಂತದ ವೇಳೆಗೆ ತಂಡಕ್ಕೆ ಸೇರಿಕೊಂಡಿದ್ದ ಶಫಾಲಿ, ತಮ್ಮ ಎಂದಿನ ಆಕ್ರಮಣಕಾರಿ ಶೈಲಿಯಲ್ಲಿ ಬ್ಯಾಟ್ ಬೀಸಿದ್ದರಲ್ಲದೆ ಮಹಿಳಾ ವಿಶ್ವಕಪ್ ಫೈನಲ್‌ನಲ್ಲಿ ಅರ್ಧಶತಕ ಗಳಿಸಿದ ಅತಿ ಕಿರಿಯ ಆಟಗಾರ್ತಿ ಎನಿಸಿದರು.

ಆದರೆ ಕೇವಲ 13 ರನ್ ಅಂತರದಿಂದ ಶತಕ ವಂಚಿತರಾದರು. ಶಫಾಲಿ 78 ಎಸೆತಗಳಲ್ಲಿ ಏಳು ಬೌಂಡರಿ ಹಾಗೂ ಎರಡು ಸಿಕ್ಸರ್ ನೆರವಿನಿಂದ 87 ರನ್ ಗಳಿಸಿದರು.

ಈ ನಡುವೆ ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಜೆಮಿಮಾ ರಾಡ್ರಿಗಸ್ (24) ಹಾಗೂ ನಾಯಕಿ ಹರ್ಮನ್‌ಪ್ರೀತ್ ಕೌರ್ (20) ವಿಕೆಟ್‌ಗಳನ್ನು ಬೇಗನೇ ಕಳೆದುಕೊಂಡಿರುವುದು ಹಿನ್ನಡೆಯಾಗಿ ಪರಿಣಮಿಸಿತು. ಆದರೆ ಮಧ್ಯಮ ಕ್ರಮಾಂಕದಲ್ಲಿ ಸಮಯೋಚಿತ ಅರ್ಧ ಶತಕ ಗಳಿಸಿದ ದೀಪ್ತಿ ಶರ್ಮಾ (58) ತಂಡವನ್ನು ಸವಾಲಿನ ಮೊತ್ತದತ್ತ ಮುನ್ನಡೆಸಿದರು. ಕೊನೆಯಲ್ಲಿ 24 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ ಮೂರು ಬೌಂಡರಿಗಳಿಂದ 34 ರನ್ ಗಳಿಸಿದ ರಿಚಾ ಘೋಷ್ ತಂಡವನ್ನು 300ರ ಗಡಿಯ ಸನಿಹಕ್ಕೆ ತಲುಪಿಸಿದರು.

## 11 ರಾಯಭಾರಿಗಳ ವಾಪಸ್: ಸರ್ಕಾರದ ನಿರ್ಧಾರಕ್ಕೆ ನೇಪಾಳ ಸುಪ್ರೀಂ ಕೋರ್ಟ್ ತಡೆ



• ಪ್ರಜೋದಯ ವರದಿ

**ಕಠ್ಮಂಡು:** ಚೀನಾ, ಅಮೇರಿಕಾ ಸೇರಿ 11 ರಾಷ್ಟ್ರಗಳಲ್ಲಿನ ತನ್ನ ರಾಯಭಾರಿಗಳನ್ನು ವಾಪಸು ಕರೆಸಿಕೊಳ್ಳುವ ಸರ್ಕಾರದ ನಿರ್ಧಾರಕ್ಕೆ ನೇಪಾಳ ಸುಪ್ರೀಂ ಕೋರ್ಟ್ ಭಾನುವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಶಾರಂಗ ಸುವೇದಿ ಹಾಗೂ ಶ್ರೀಕಾಂತ ಪೌಡೆಲ್ ಅವರು ಇದ್ದ ಪೀಠವು ಈ ಕುರಿತ ಅರ್ಜಿ ವಿಚಾರಣೆ ನಡೆಸಿ, ಮಧ್ಯಂತರ ತಡೆಯಾಜ್ಞೆ ನೀಡಿದೆ.

ಚೀನಾ, ಜರ್ಮನಿ, ಇಸ್ರೇಲ್, ಮಲೇಷ್ಯಾ, ಕತಾರ್, ರಷ್ಯಾ, ಸೌದಿ ಅರೇಬಿಯಾ, ಸ್ಪೇನ್, ಬ್ರಿಟನ್, ಅಮೇರಿಕಾ ಹಾಗೂ ಜಪಾನ್‌ನಲ್ಲಿರುವ ರಾಯಭಾರಿಗಳನ್ನು ನ.6ರೊಳಗಾಗಿ ವಾಪಸ್ ಕರೆಸಿಕೊಳ್ಳಬೇಕೆಂದು ಅ.6ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಸರ್ಕಾರದ ಈ ನಿರ್ಧಾರ ಪ್ರಶ್ನಿಸಿ, ಈ ಎಲ್ಲಾ ದೇಶಗಳಲ್ಲಿರುವ ರಾಜತಾಂತ್ರಿಕರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಹಿಂದಿನ, ನೇಪಾಳ ಕಮ್ಯುನಿಸ್ಟ್ ಪಾರ್ಟಿಯುನಿಫೈಡ್ ಮಾರ್ಕ್ಸಿಸ್ಟ್ ಹಾಗೂ ನೇಪಾಳಿ ಕಾಂಗ್ರೆಸ್ ಮೈತ್ರಿಕೂಟ ನೇತೃತ್ವದ ಸರ್ಕಾರ ಈ ರಾಯಭಾರಿಗಳನ್ನು ನೇಮಕ ಮಾಡಿತ್ತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019